# ಅಧ್ಯಾಯ ೧೧



## ಲಲಿತ ಕಲೆಗಳು

### ವಾಸ್ತುಶಿಲ್ಪ ಹಾಗೂ ಶಿಲ್ಪಕಲೆ

**ಇತಿಹಾಸ-ಪೂರ್ವ ಯುಗ**

ಇತಿಹಾಸ ಪೂರ್ವಕಾಲದಷ್ಟು ಪ್ರಾಚೀನ ಜಾಡು ಹಿಡಿಯಬಹುದಾದ ವಾಸ್ತುಶಿಲ್ಪದ ದೀರ್ಘ ಸಂಪ್ರದಾಯವು ಕರ್ನಾಟಕದಲ್ಲಿದೆ. ಅಷ್ಟೇ ಅಲ್ಲ, ಮಾನವರು ಸೃಷ್ಟಿಸಿದ ಕೃತಕ ವಾಸದ ನೆಲೆಗಳ ಅತ್ಯಂತ ಪುರಾತನ ಸಾಕ್ಷಿಗಳು ರಾಜ್ಯದಲ್ಲಿವೆ. ಗುಲಬರ್ಗಾ ಜಿಲ್ಲೆಯ ಶೋರಾಪುರ ತಾಲ್ಲೂಕಿನ ಹುಣಸಗಿ, ಬೈಚಬಾಲ್, ಇಸ್ಲಾಂಪುರ್, ಮುಂತಾದ ಸ್ಥಳಗಳಲ್ಲಿ ನಡೆಸಲಾದ ಪುರಾತತ್ವ ಉತ್ಖನನಗಳು, ಪ್ರಾರಂಭಿಕ ಹೋಮಿನಿಡ್‌ಗಳು ನಿರ್ಮಿಸಿದ ರಚನೆಗಳ ಮೇಲೆ ಬೆಳಕು ಚೆಲ್ಲಿವೆ. ಸುಮಾರು ದಶಲಕ್ಷ ವರ್ಷಗಳಷ್ಟು ಪುರಾತನವಾದ, ಮಾನವ ಇತಿಹಾಸದ ಪ್ರಾರಂಭಿಕ ಸಾಂಸ್ಕೃತಿಕ ಹಂತಕ್ಕೆ ಸೇರಿದ ವರ್ತುಲಾಕಾರದ ಯೋಜನೆಯಲ್ಲಿ ಒಪ್ಪವಾಗಿ ವ್ಯವಸ್ಥೆಗೊಳಿಸಲಾಗಿದ್ದ ಶಿಲಾವೃತ್ತ ಗುರುತುಗಳು ದೊರೆತಿವೆ. ಈ ವರ್ತುಲಾಕಾರದ ರಚನೆಗಳು, ಬಹುಶಃ ಗಾಳಿಯಿಂದ ಹುಲ್ಲು ಅಥವಾ ಜೊಂಡಿನ ಆಶ್ರಯಗಳನ್ನು ರಕ್ಷಿಸಲು ನಿರ್ಮಿಸಲಾಗಿತ್ತೆಂದು ತೋರುತ್ತದೆ. ಪ್ರಾರಂಭಿಕ ಹೋಮಿನಿಡ್ ಪೂರ್ವಜರ ಕಟ್ಟಡ ನಿರ್ಮಾಣ ಚಟುವಟಿಕೆಯ ಕೆಲ ಸಾಕ್ಷಿಗಳು ದೊರೆತಿರುವ ಮತ್ತೊಂದು ಪ್ರದೇಶವೆಂದರೆ ಆಫ್ರಿಕಾ.

ನವಶಿಲಾಯುಗದಲ್ಲಿ, ಅಲೆಮಾರಿ ಜನರು ಬೇಟೆ ಹಾಗೂ ಆಹಾರ ಸಂಗ್ರಹಣೆಗಳೇ ಪ್ರಧಾನವಾಗಿದ್ದು ಜೀವನ ಶೈಲಿಯನ್ನು ತ್ಯಜಿಸಿ, ಕೃಷಿಯನ್ನು ಪ್ರಾರಂಭಿಸಿ, ಗ್ರಾಮಗಳಲ್ಲಿ

ನೆಲೆಸಲು ಪ್ರಾರಂಭಿಸಿದಾಗ, ನಿಯಮಿತ ಕಟ್ಟಡ ನಿರ್ಮಾಣದ ಕಾರ್ಯವು ಪ್ರಾರಂಭವಾಯಿತು. ಕರ್ನಾಟಕದಲ್ಲಿ ಉತ್ಖನನ ಮಾಡಿದ ನವಶಿಲಾಯುಗದ ತಾಣಗಳಾದ ಪಿಕ್ಲಿಹಾಳ ಹಾಗೂ ವಟಗಲ್ (ರಾಯಚೂರು ಜಿಲ್ಲೆ), ತೆಕ್ಕಲಕೋಟಾ (ಬಳ್ಳಾರಿ ಜಿಲ್ಲೆ), ಮುಂತಾದೆಡೆಗಳಲ್ಲಿ, ವರ್ತುಲಾಕಾರದ ಗುಡಿಸಲುಗಳನ್ನು ಪತ್ತೆಹಚ್ಚಲಾಗಿದೆ. ಇಂದಿಗೂ ಹಲವಾರು ಬುಡಕಟ್ಟು ಸಮುದಾಯಗಳಲ್ಲಿ ಜಾರಿಯಿರುವ ಆಚರಣೆಯಾದ ಶಂಕುವಿನಾಕಾರದ ಹುಲ್ಲು ಛಾವಣಿಯಿರುವ, ತಡಿಕೆ, ಹಾಗೂ ಮಣ್ಣು ಲೇಪಿತ ಗೋಡೆಗಳನ್ನು ಹೊಂದಿರುವ ಸರಳವಾದ ಈ ಕಟ್ಟಡ ನಿರ್ಮಾಣದ ಶೈಲಿಯ ಪ್ರಾಚೀನತೆಯನ್ನು ಸುಮಾರು ಕ್ರಿ.ಪೂ. ೩೦೦೦ – ೧೨೦೦ ಎಂದು ಅಂದಾಜು ಮಾಡಲಾಗಿದೆ.

ಕಲ್ಲಿನ ಕಟ್ಟಡ ನಿರ್ಮಾಣದ ಪ್ರಾರಂಭಿಕ ಸಾಕ್ಷಿಗಳು ಕಬ್ಬಿಣ ಯುಗ, ಅಂದರೆ ಮೆಗಾಲಿಥಿಕ್(ಬೃಹತ್‌ಶಿಲಾ) ಯುಗಕ್ಕೆ (ಕ್ರಿ.ಪೂ. ೧೨೦೦ – ೩೦೦) ಸೇರಿದಂತಹವು. ಯಾವುದೇ ವಸತಿ ಅಥವಾ ಇತರ ಕಟ್ಟಡಗಳು ದೊರೆಯದಿದ್ದರೂ, ಬೃಹತ್‌ಶಿಲಾ ಗೋರಿಗಳು ಎಂದು ಕರೆಯಲಾಗುವ ಬೃಹತ್ ಸಂಖ್ಯೆಯ ಶವಸಂಸ್ಕಾರದ ರಚನೆಗಳಿವೆ. ಹಲವಾರು ಬೃಹತ್‌ಶಿಲಾ ಗೋರಿಗಳಲ್ಲಿ ಕಲ್ಲಿನ ಪೆಟ್ಟಿಗೆಗಳಿದ್ದು, ನಯಮಾಡಿದ ಗ್ರಾನೈಟ್‌ನ ಕಲ್ಲಿನ ಚಪ್ಪಡಿಗಳನ್ನು ಬಳಸಲಾಗಿದೆ. ಇವು ಸಣ್ಣ ಚೌಕ ಅಥವಾ ಆಯತಾಕಾರದ ಗೂಡುಗಳಂತೆ ಕಾಣಿಸುತ್ತವೆ. ಗುಲ್ಬರ್ಗಾದ ರಾಜನ ಕೊಲ್ಲೂರು ಮುಂತಾದ ಸ್ಥಳಗಳಲ್ಲಿ, ಕಲ್ಲಿನ ಅನೇಕ ಸಾಲುಜೋಡಣೆಗಳು, ಅಂದರೆ ಪಂಕ್ತಿಗಳಲ್ಲಿ ವ್ಯವಸ್ಥೆಗೊಳಿಸಲಾದ ನಯಮಾಡಿದ ಕಲ್ಲಿನ ಕಂಬಗಳು ದೊರೆತಿವೆ. ಅವು ಧರ್ಮವಿಧಿಗಳನ್ನು ಆಚರಿಸುವ ಪ್ರಾಕಾರಗಳಾಗಿದ್ದವೆಂದು ಹೇಳಲಾಗುತ್ತದೆ – ಬಹುಶಃ ಅವು ಖಗೋಳೀಯ ವೀಕ್ಷಣೆಗೆ ಸಂಬಂಧ ಹೊಂದಿರಬಹುದು.

ಪುನಃ ಬೃಹತ್‌ಶಿಲಾ (ಕಬ್ಬಿಣ) ಯುಗದಲ್ಲಿ, ಶಿಲ್ಪಗಳ ಪ್ರಥಮ ಸಾಕ್ಷಿಯು ನಮಗೆ ದೊರೆಯುತ್ತದೆ. ಕೆಲವು ಬೃಹತ್‌ಶಿಲಾ ಯುಗಗಳಲ್ಲಿ ಚಾಚಿದ ಕೈಗಳಿರುವ ನಿಂತ ಮಾನವಾಕಾರದ ಚಪ್ಪಟೆಯಾದ ಗ್ರಾನೈಟ್ ಚಪ್ಪಡಿಗಳು ದೊರೆತಿವೆ.

## ಪ್ರಾಗಿತಿಹಾಸ ಕಾಲ

ರಾಯಚೂರು, ಬಳ್ಳಾರಿ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಅಶೋಕನ ಹಲವಾರು ಶಾಸನಗಳು ದೊರೆತಿದ್ದರೂ, ಇಲ್ಲಿಯತನಕ, ಮೌರ್ಯರ ಕಾಲಕ್ಕೆ (ಕ್ರಿ.ಪೂ. ೪ – ೩) ಸೇರ್ಪಡೆ ಮಾಡಬಹುದಾದ ಯಾವುದೇ ವಾಸ್ತುಶಿಲ್ಪವಾಶೇಷಗಳು ದೊರೆತಿಲ್ಲ. ಬ್ರಹ್ಮಗಿರಿಯ (ಚಿತ್ರದುರ್ಗ ಜಿಲ್ಲೆ) ಉತ್ಖನನಗಳಲ್ಲಿ ದೊರೆತ ಕಮಾನುಗೂಡಿನ ಆಕಾರದ ಇಟ್ಟಿಗೆಯ ರಚನೆಯು (ಕೇವಲ ಕೆಳಗಿನ ಭಾಗ ಮಾತ್ರ), ಸುಮಾರು ಕ್ರಿ.ಪೂ. ೨ನೆಯ ಶತಮಾನಕ್ಕೆ ಸೇರಿರುವುದೆಂದು ಕಾಲಗಣನೆ ಮಾಡಲಾಗಿದೆ. ಬಹುಶಃ, ಇದು ಕರ್ನಾಟಕದಲ್ಲಿ ಇಟ್ಟಿಗೆಯ ಕಟ್ಟಡ ನಿರ್ಮಾಣದ ಪ್ರಾರಂಭವೆಂದು ತೋರುತ್ತದೆ. ಕ್ರಿ.ಶ. ೧ – ೩ನೆಯ ಶತಮಾನಕ್ಕೆ ಸೇರಿದ ಪ್ರಾರಂಭಿಕ ಶಾತವಾಹನ ಕಾಲದ ಇಟ್ಟಿಗೆಯ ಕೋಟೆ ಗೋಡೆಗಳು ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಬೆಳಗಾವಿ ಬಳಿಯ ವಡಗಾಂವ್ ಮಾಧವ್‌ಪುರ್ ಹಾಗೂ ಗುಲ್ಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ಕಂಡುಬಂದಿವೆ.

ಮೌರ್ಯ ಹಾಗೂ ಶಾತವಾಹನರ ಕಾಲದಲ್ಲಿ ಸನ್ನತಿಯು ಒಂದು ಪ್ರಮುಖ ನಗರವಾಗಿತ್ತು. ಮೌರ್ಯರ ಕಾಲದ ಅವಶೇಷಗಳು, ಅಶೋಕನ ಕಾಲದ ಶಿಲಾಶಾಸನಗಳ ರೂಪದಲ್ಲಿ ನಿರ್ದಿಷ್ಟವಾಗಿ ದೊರೆತಿದ್ದರೂ, ಸುಮಾರು ಕ್ರಿ.ಶ. ೧ – ೩ನೆಯ ಶತಮಾನಕ್ಕೆ ಸೇರಿದ ವಾಸ್ತು ಹಾಗೂ ಶಿಲ್ಪಕಲಾ ಅವಶೇಷಗಳನ್ನು ವಿಸ್ತೃತವಾಗಿ ಇಲ್ಲಿ ಕಾಣಬಹುದು. ಕನಿಷ್ಠ ನಾಲ್ಕು ಬೌದ್ಧ ಸ್ತೂಪಗಳಾದರೂ ಇದ್ದು, ಅವುಗಳಲ್ಲಿ ಒಂದನ್ನು ಸನ್ನತಿಯ ಬಳಿ ಇರುವ ಕನಗನಹಳ್ಳಿಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಉತ್ಖನನದ ಮೂಲಕ ತೆರೆದಿಟ್ಟಿದೆ. ವೃತ್ತಾಕಾರದ ತಳ (ಮೇಧಿ) ಹಾಗೂ ಅರ್ಧಗೋಳಾಕಾರದ ಗುಮ್ಮಟ (ಅಂಡ), ವಲ್ಲದೆ ಸುತ್ತಲೂ ಕೈಪಿಡಿಯನ್ನೂ ಹೊಂದಿದ್ದು ಇಡೀ ಸ್ತೂಪವು ಬೌದ್ಧ ವಿಷಯಗಳನ್ನು ಆಧರಿಸಿದ ಅರೆಯುಬ್ಬಿನ ಕೆತ್ತನೆಗಳಿರುವ ಅಲಂಕಾರಿಕ ಸುಣ್ಣಕಲ್ಲಿನ ಪಟ್ಟಿಕೆಗಳಿಂದ ಆವೃತವಾಗಿತ್ತು. ಅವುಗಳಲ್ಲಿ ಒಂದರಲ್ಲಿ, ಅಶೋಕನ ಉಬ್ಬುಕೆತ್ತನೆ ಇದೆ. ಅಲ್ಲದೆ, ಬುದ್ಧ, ನಾಗ, ಸುಣ್ಣಕಲ್ಲಿನ ಆಯಕ ಕಂಭ ಬೌದ್ಧ ಶಿಲ್ಪ ಸ್ಮಾರಕಶಿಲ್ಪ ಇತ್ಯಾದಿಗಳು ಸನ್ನತಿಯಲ್ಲಿ ದೊರೆತಿವೆ. ಇವೆಲ್ಲವೂ, ಆಂಧ್ರ ಪ್ರದೇಶದಲ್ಲಿ ವ್ಯಾಪಕವಾಗಿ ಕಾಣುವ ಅಮರಾವತಿ ಶೈಲಿಯ ನಿದರ್ಶನ ಆಗಿವೆ.

ಬನವಾಸಿಯಲ್ಲಿ ಉತ್ಖನನ ಮಾಡಿದ ಲಾಳಾಕಾರದ ಇಟ್ಟಿಗೆಯ ರಚನೆಯಲ್ಲಿ, ಲಾಳಾಕೃತಿಯ ಲಾಳಾ ಮೂಲೆಯ ಬಳಿ ತೆಳುಗೋಡೆಯನ್ನು ಒದಗಿಸುವ ಮೂಲಕ ಮಂಟಪದಿಂದ ಪ್ರತ್ಯೇಕವಾದ ಗರ್ಭಗೃಹದ ತತ್ವವನ್ನು ಪರಿಚಯಿಸಿರುವುದು ಗೊತ್ತಾಗುತ್ತದೆ. ಇದನ್ನು ಸುಮಾರು ಕ್ರಿ.ಶ. ೩ – ೪ನೆಯ ಶತಮಾನದ್ದೆಂದು ಗುರುತಿಸಲಾಗಿದೆ.

## ಆದಿ ಕದಂಬ ಯುಗ

ಕದಂಬರ ಆಳ್ವಿಕೆಯೊಂದಿಗೆ, ಸ್ಥಳೀಯ ಅರಸರ ಸಾರ್ವಭೌಮತ್ವವು ರಾಜಕೀಯ ಇತಿಹಾಸ, ವಾಸ್ತು ಹಾಗೂ ಶಿಲ್ಪಕಲೆಗಳಲ್ಲೂ, ಕರ್ನಾಟಕದ ಸ್ಥಳೀಯ ಶೈಲಿಯ ಉಗಮದ ಗಮನಾರ್ಹ ಅಂಶವನ್ನು ಕಾಣಬಹುದು. ಬನವಾಸಿಯ ಬಳಿಯಿರುವ ಗುಡ್ನಾಪುರದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಉತ್ಖನನಗಳಲ್ಲಿ, ಆದಿ ಕದಂಬರ ಕಾಲದ ಅರಮನೆಯ ಪ್ರದೇಶದಲ್ಲಿ ಅವಶೇಷಗಳು ಕಟ್ಟಡಾವಶೇಷಗಳು ದೊರೆತಿವೆ. ಅರಮನೆ ಹಾಗೂ ದೇವಾಲಯಗಳ ಅಡಿಪಾಯದ ಇಟ್ಟಿಗೆಯ ರಚನೆಯ ಹಲವಾರು ವರಸೆ ಗಳನ್ನು ಅವಶೇಷಗಳ ನಡುವೆ ಕಾಣಬಹುದು. ಹಲಸಿಯಲ್ಲಿ (ಬೆಳಗಾವಿ ಜಿಲ್ಲೆ) ಬಹುಶಃ ಉತ್ಖನನವಾದ ಆಡಿಪಾಯದ ವರಸೆಗಳ, ಲಾಳಾಕಾರದಲ್ಲದೆ

ರಚನೆ ಹಾಗೂ ಬನವಾಸಿಯಲ್ಲಿ ಉತ್ಖನನದಲ್ಲಿ ಕಂಡುಬಂದಿರುವ ಇಟ್ಟಿಗೆಯ ಲಾಳಾಕಾರದ ಮತ್ತೊಂದು ರಚನೆಯೂ ಕಂಡುಬಂದಿದ್ದು ಇದು, ಆದಿ ಕದಂಬರ ಕಾಲಕ್ಕೆ ಸೇರಿದವೆಂದು ತೋರುತ್ತದೆ. ಈ ಅವಧಿಯಲ್ಲಿ ಇಟ್ಟಿಗೆಯ ವಾಸ್ತುಶಿಲ್ಪವು ಸಾಮಾನ್ಯವಾಗಿತ್ತೆಂದು ತೋರುತ್ತದೆ. ಕೇವಲ ತಾಳಗುಂದದಲ್ಲಿ (ಶಿವಮೊಗ್ಗ ಜಿಲ್ಲೆ) ಮಾತ್ರ ಇವರ ಶಿಲಾ ವಾಸ್ತುಶಿಲ್ಪದ ಏಕೈಕ ಉದಾಹರಣೆಯಾಗಿದ್ದು. ಪ್ರಣವೇಶ್ವರ ದೇವಾಲಯದ ಗರ್ಭಗೃಹದ ಕೆಲವು ಭಾಗಗಳು ಕದಂಬ ಕಾಲಕ್ಕೆ ಸೇರಿದ್ದು, ಅದರ ಬಾಗಿಲೊಂದರಲ್ಲಿ ಕದಂಬರ ಕಾಲದ ಶಾಸನವೂ ಇದೆ.



ಬೇಗೂರಿನ ನಾಗೇಶ್ವರ ದೇವಸ್ಥಾನ

ಬನವಾಸಿಯಲ್ಲಿ ಈ ಮೊದಲು ಹೇಳಿದ ಲಾಳಾಕಾರದ ಇಟ್ಟಿಗೆಯ ರಚನೆಯ ಉತ್ಖನನದಲ್ಲಿ ದೊರೆತ ಕಾರ್ತಿಕೇಯನ ಮೂರ್ತಿಯು ನಯನಮನೋಹರವಾಗಿದ್ದು, ಶೈಲಿಯಲ್ಲಿ ಗುಪ್ತರ ಪ್ರಭಾವವನ್ನು ತೋರುತ್ತದೆ. ಹೈವೆಯಲ್ಲಿ ದೊರೆತ ಕೆಲವು ಬೌದ್ಧ ವಿಗ್ರಹಗಳು, ಗೋಕರ್ಣ ಹಾಗೂ ಇಡಗುಂಜಿಯ ಗಣೇಶನ ವಿಗ್ರಹಗಳು (ಎಲ್ಲವೂ ಉತ್ತರ ಕನ್ನಡ ಜಿಲ್ಲೆಯಲ್ಲಿವೆ) ಹಾಗೂ ಜಂಬಿಟ್ಟಿಗೆಯಲ್ಲಿ ದೊರೆತಿರುವ ಮಹಿಷಮರ್ಧಿನಿ ಶಿಲ್ಪವು, ಆದಿ ಕದಂಬ ಶಿಲ್ಪಕಲೆಯ ಇತರ ಉದಾಹರಣೆಗಳಾಗಿವೆ.

## ಗಂಗರ ಯುಗ

ಆರಂಭದಲ್ಲಿ ಕೋಲಾರ ಹಾಗೂ ನಂತರ ತಲಕಾಡನ್ನು ರಾಜಧಾನಿಯನ್ನಾಗಿಸಿಕೊಂಡಿದ್ದ ಗಂಗರು, ಬನವಾಸಿ ಕದಂಬರ ಕಾಲದಲ್ಲೇ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರೂ, ಕ್ರಿ.ಶ. ೮ – ೯ನೆಯ ಶತಮಾನಕ್ಕೆ ಮುಂಚಿನ ಕಾಲದ್ದೆಂದು ಖಚಿತವಾಗಿ ಹೇಳುವ ವಾಸ್ತು ಶಿಲ್ಪಗಳು ಯಾವುದೂ ಇಲ್ಲ. ತಳಭಾಗದಲ್ಲಿ ಘನಾಕೃತಿಯುಳ್ಳ, ಆದರೆ ತುದಿಯನ್ನು ಹೊಂದಿರುವ ತೆಳುವಾದ ಚಕ್ರಕಾರದ ಬೋದಿಗೆ ಕೆಲವೊಮ್ಮೆ ಅರ್ಧ ಮುರಿದ ಚಕ್ರದ ಕಂಭಗಳು, ತಲಕಾಡಿನಲ್ಲಿ ಎಲ್ಲೆಡೆ ಬಿದ್ದಿವೆ. ಅವುಗಳಲ್ಲಿ ಹಲವನ್ನು ಹೊರಗೆಳೆದು, ನಂತರದ



*Manastamba, Kambadahalli, Mandya District*

ಕಟ್ಟಡಗಳಿಗೆ ಕಾಲಾಂತರದಲ್ಲಿ ಬಳಸಲಾಗಿದೆ. ತಲಕಾಡಿನ ಅರ್ಕೇಶ್ವರ, ಪಾತಾಳೇಶ್ವರ ಹಾಗೂ ಮರಳೇಶ್ವರಗಳು ಈ ಕಾಲಕ್ಕೆ ಸೇರಿದವೆಂದು ಹೇಳಬಹುದು. ಒಂದು ಕಾಲದಲ್ಲಿ ಗಂಗರ ಪ್ರತಿಷ್ಠಿತ ರಾಜಧಾನಿಯಾಗಿದ್ದು ಮಣ್ಣೆಯ ಕಪಿಲೇಶ್ವರ ದೇವಾಲಯ ಹಾಗೂ ಅದೇ ಸ್ಥಳದಲ್ಲಿ ಇರುವ ಸೋಮೇಶ್ವರ ದೇವಾಲಯಗಳು ಇಟ್ಟಿಗೆಯಲ್ಲಿ ಕಟ್ಟಿರುವಂತದಾಗಿದ್ದು ಬಹುಶಃ ಕ್ರಿ.ಶ. ೮ನೆಯ ಶತಮಾನಕ್ಕೆ ಸೇರಿವೆ.

ಆದರೆ, ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಗಂಗರ ಕಾಲದ ಕೆಲವು ಕಟ್ಟಡಗಳಿವೆ. ಕ್ರಿ.ಶ. ೮೦೦ರಲ್ಲಿ, ಚಂದ್ರಪ್ರಭ ಬಸದಿಯನ್ನು ಶಿವಮಾರನು ನಿರ್ಮಿಸಿದನು. ಕ್ರಿ.ಶ. ೯೮೨ರಲ್ಲಿ ಎರಡಂತಸ್ತಿನ ಕಟ್ಟಡವಾದ ಚಾವುಂಡರಾಯ ಬಸ್ತಿಯನ್ನು ಚಾವುಂಡರಾಯನು ನಿರ್ಮಿಸಿದನು. ಗಂಗ ದೊರೆ ರಾಚಮಲ್ಲನ (ಕ್ರಿ.ಶ. ೯೭೪ – ೯೮೪) ಮಂತ್ರಿಯಾದ ಚಾವುಂಡರಾಯನು, ದೊಡ್ಡ ಬೆಟ್ಟದ ಮೇಲಿನ ವಿಶ್ವ ವಿಖ್ಯಾತ ಗೊಮ್ಮಟನ ಏಕಶಿಲಾ ಪ್ರತಿಮೆಯನ್ನು ಕೆತ್ತನೆ ಮಾಡಿಸಿದನು. ಈ ಅದ್ಭುತ ಶಿಲ್ಪವನ್ನು ಕ್ರಿ.ಶ. ೯೮೩ರಲ್ಲಿ ಪೂರ್ಣಗೊಳಿಸಲಾಯಿತು. ಶಿಲ್ಪಕಲಾ ಕ್ಷೇತ್ರದಲ್ಲಿ ಇದು

ಬಹುಶಃ ಕರ್ನಾಟಕದ ಅತ್ಯಂತ ಮಹತ್ತರವಾದ ಸಾಧನೆಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

ಮಾರಸಿಂಹನ ಗೌರವಾರ್ಥವಾಗಿ ಕ್ರಿ.ಶ. ೯೭೪ರಲ್ಲಿ ನಿರ್ಮಿಸಿದ ಬೃಹತ್ತಾದ ಕೂಗೆ ಬ್ರಹ್ಮದೇವ ಕಂಭ ಹಾಗೂ ಕ್ರಿ.ಶ. ೯೮೩ರಲ್ಲಿ ಚಾವುಂಡರಾಯನ ತ್ಯಾಗದ ಬ್ರಹ್ಮದೇವ ಕಂಭಗಳು ಜೈನ ಮತಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ಕೆತ್ತನೆಯುಳ್ಳ ಕಂಭಗಳಿಗೆ ಉತ್ತಮ ಉದಾಹರಣೆಗಳಾಗಿವೆ. ತ್ಯಾಗದ ಬ್ರಹ್ಮದೇವನ ಕಂಭದ ಕಾಂಡದ ಮೇಲೆ ಲತಾಬಳ್ಳಿಯ ಸುಂದರ ಸುರುಳಿಯಲಂಕಾರ ಹಾಗೂ ಎರಡೂ ಬದಿಗಳಲ್ಲಿ ಚೌರಿ ಹೊತ್ತವರ ಮಗ್ಗುಲಲ್ಲಿ ನಿಂತಿರುವ ಚಾವುಂಡರಾಯ ಹಾಗೂ ಆತನ ಗುರುವಾದ ನೇಮಿಚಂದ್ರರ ಉಬ್ಬುಕೆತ್ತನೆಗಳಿವೆ.

ವಾಸ್ತುಶಿಲ್ಪ ಶೈಲಿಯ ಪರಿಶುದ್ಧತೆ ಹಾಗೂ ನಾಜೂಕು ಶಿಲ್ಪಕಲೆಗಾಗಿ ಹೆಸರುವಾಸಿಯಾದ ಕೆಲವು ದೇವಾಲಯಗಳನ್ನು ತಲಕಾಡಿನ ಗಂಗರು ನಿರ್ಮಿಸಿದರು. ಮಂಡ್ಯ ಜಿಲ್ಲೆಯ ಕಂಬದಹಳ್ಳಿಯಲ್ಲಿ ಇರುವ ಪಂಚಕೂಟ ಬಸ್ತಿಯು (ಕ್ರಿ.ಶ. ೧೦ನೆಯ ಶತಮಾನ) ಅಪ್ಪಟ ದ್ರಾವಿಡ ದೇವಾಲಯ ಶೈಲಿಯ ಉತ್ತಮ ಉದಾಹರಣೆ. ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟದಲ್ಲಿರುವ ಭೋಗ ನಂದೀಶ್ವರ (೯ನೆಯ ಶತಮಾನ) ದೇವಾಲಯವು ಗಂಗ–ಬಾಣ ಶೈಲಿಯಲ್ಲಿ ನಿರ್ಮಿತವಾಗಿದ್ದು, ಎರಡು ದೇವಾಲಯಗಳನ್ನು ಹೊಂದಿದ್ದು ಉಪ್ಪರಿಗೆಯಲ್ಲಿ ಸ್ಪಷ್ಟವಾಗಿ ಗುರುತಿಸಲಾದ ವಿಗ್ರಹ ಶಿಲ್ಪಗಳಿಂದ ಯಥೇಚ್ಛವಾಗಿ ಅಲಂಕೃತವಾದ ಕಿರುಗೋಡೆಗಳು ದಾಕ್ಷಿಣಾತ್ಯ ವಿಮಾನ ಶೈಲಿಯ ಅತ್ಯುತ್ತಮ ಉದಾಹರಣೆಯಾಗಿದೆ. ನವರಂಗ ಎಂದು ಕರೆಯಲಾಗುವ ಕಂಭದ ಹಜಾರವು ಸೂಕ್ಷ್ಮವಾಗಿ ಕೆತ್ತನೆ ಮಾಡಲಾದ ದೇವರು ಹಾಗೂ ದೇವಾಂಶಸಂಭೂತರನ್ನು ಹೊತ್ತಿದೆ. ಕಪ್ಪು ಗ್ರಾನೈಟ್‌ನ ಉತ್ಸವ ಸಭಾಂಗಣವು ಕೆತ್ತನೆಯ ಸೂಕ್ಷ್ಮ ವಿವರಗಳಿಗಾಗಿ ಪ್ರಸಿದ್ಧವಾಗಿದೆ. ಅದೇ ಕಾಲದ ಕೋಲಾರದ ಕೋಲಾರಮ್ಮ ದೇವಾಲಯವನ್ನು ದಾಕ್ಷಿಣಾತ್ಯ ವಿಮಾನದ ಗಂಗ–ಚೋಳ ನುಡಿಕಟ್ಟಿನಲ್ಲಿ ನಿರ್ಮಿಸಲಾಗಿದೆ.

## ಪ್ರಾರಂಭಿಕ ಚಾಲುಕ್ಯ ಶೈಲಿ

ಕರ್ನಾಟಕವನ್ನು ದೇವಾಲಯ ವಾಸ್ತುಶಿಲ್ಪದ ತೊಟ್ಟಿಲೆಂದು ನಿಜವಾದ ಅರ್ಥದಲ್ಲಿ ಕರೆಯಲಾಗುತ್ತದೆ; ಕಾರಣ, ಭಾರತದ ಎರಡು ಪ್ರಮುಖ ದೇವಾಲಯ ಶೈಲಿಗಳಾದ ಚೌಕಾಕಾರದ ಮೇಲ್ಕಟ್ಟಡ ಅಥವಾ ಶಿಖರವನ್ನು ಹೊಂದಿರುವ ದಾಕ್ಷಿಣಾತ್ಯ ವಿಮಾನ ಹಾಗೂ ವಕ್ರರೇಖೀಯ ಗೋಪುರಕ್ಕಾಗಿ ಗುರುತಿಸಲಾಗುವ ರೇಖಾನಾಗರ ಎಂದೂ ಕರೆಯಲಾಗುವ ಉತ್ತರದ ರೇಖಾಪ್ರಸಾದಗಳು ಮಲಪ್ರಭಾ ಕಣಿವೆಯಲ್ಲಿ ಕೈಗೊಂಡ ನವೀನ ರೀತಿಯ ಪ್ರಯೋಗದ ಫಲವಾಗಿ ಏಕಕಾಲದಲ್ಲಿ ವಿಕಸನಗೊಂಡಿತು. ಕದಂಬನಾಗರ ಶೈಲಿಯೆಂದೂ ಕೆಲವರಿಂದ ಕರೆಯಲ್ಪಡುವ ಶಂಖಾಕಾರದ ಬಹುಅಂತಸ್ತಿನ ಶಿಖರವಿರುವ ಮೂರನೆಯ ರೀತಿಯೂ ಪ್ರಕಟವಾಗಿದ್ದು ಪಶ್ಚಿಮ ಕರಾವಳಿಯಲ್ಲಿ ಕೆಲಕಾಲ ಜನಪ್ರಿಯವಾಯಿತು. ಪ್ರಯೋಗಗಳ ಪರಿಣಾಮವಾಗಿ, ಎರಡೂವರೆ ಶತಮಾನಗಳ (ಕ್ರಿ.ಶ. ೫೦೦ – ೭೫೦) ಅಲ್ಪಾವಧಿಯಲ್ಲೇ, ಕರ್ನಾಟಕದ ಐಹೊಳೆ, ಮಹಾಕೂಟ, ಬಾದಾಮಿ ಹಾಗೂ ಪಟ್ಟದಕಲ್‌ಗಳಲ್ಲಿ ಪ್ರಾರಂಭಿಕ ಚಾಲುಕ್ಯ ಅರಸರು ೧೦೦ಕ್ಕೂ ಹೆಚ್ಚು ದೇವಾಲಯಗಳ ನಿರ್ಮಾಣ ಮಾಡಿದರು. ಗ್ರಾಮದ ಸಭಾಭವನವನ್ನು ಹೋಲುವ ಸರಳ, ಚಪ್ಪಟೆ–ಛಾವಣಿಯ ಮಂಟಪ ಶೈಲಿಯ ರಚನೆಗಳಿಂದ ಆರಂಭಿಸಿ ಸಂಕೀರ್ಣ ಮಾದರಿಗಳನ್ನು ವಿಕಸನಗೊಳಿಸಿದರು. ಅವರು ಉಪಯೋಗಿಸಿದ ಮರಳುಕಲ್ಲು ಮೃದುವಾಗಿಲ್ಲದಿದ್ದರೂ, ಉನ್ನತಕಲಾಮೌಲ್ಯದ ಉತ್ಕೃಷ್ಟ ಶಿಲ್ಪಗಳನ್ನು ಮೂಡಿಸಿದರು.

ಪಟ್ಟದಕಲ್ಲಿನ ಕ್ರಿ.ಶ. ೩–೪ನೆಯ ಶತಮಾನಕ್ಕೆ ಸೇರಿದ ಶಾತವಾಹನ ಕಾಲದ ಇಟ್ಟಿಗೆಯ ದೇವಾಲಯದ ಮಾದರಿಯಲ್ಲಿ ಐಹೊಳೆಯಲ್ಲಿ ನಿರ್ಮಿಸಲಾದ ಗೌಡರ್ಗುಡಿ ಎಂಬ ದೇವಾಲಯವು ಮೊದಮೊದಲು ನಿರ್ಮಿತವಾದ ಕಲ್ಲಿನ ದೇವಾಲಯವಾಗಿದೆ; ಎತ್ತರದ ಅಧಿಕಾಷ್ಠಾನದ ಮೇಲೆ ನಿಂತಿರುವ ಆಯತಾರದ ಕಂಭಗಳ ಹಜಾರವನ್ನು ಇದು ಹೊಂದಿದೆ. ಅದನ್ನು ಮೂರು ಅಂಕಣಗಳಾಗಿ ವಿಂಗಡಿಸಲಾಗಿದು, – ಚಪ್ಪಟೆಯಾದ ಮುಚ್ಚಿದ ಛಾವಣಿಯನ್ನು ಹೊಂದಿದ ಮಧ್ಯಾಂಗಣ ಹಾಗೂ ಇಳಿಜಾರದ ಛಾವಣಿಯಿರುವ ಪಡಸಾಲೆಗಳನ್ನು ಹೊಂದಿದೆ. ಮಧ್ಯದ ಅಂಕಣದ ನಡುವಿನ ಚೌಕವನ್ನು ಗರ್ಭಗೃಹವಾಗಿ ಪರಿವರ್ತಿಸಲಾಗಿದ್ದು, ಇದು ತೆರೆದ ಪ್ರದಕ್ಷಿಣಪಥ ಅಥವಾ ಪ್ರಾಕಾರವನ್ನು ಒದಗಿಸಿದೆ. ಕೆಲ ಕಾಲದ ನಂತರ, ಪ್ರಯೋಗ ಮಾಡುವ ತುಡಿತ ಹಾಗೂ ಬಿಸಿಲು–ಮಳೆಗಳಿಂದ ಭಕ್ತರಿಗೆ ರಕ್ಷಣೆ ನೀಡುವ ಉದ್ದೇಶದಿಂದ, ಅವರು ನಿರ್ಮಾಣ ಮಾಡಿದ ಮುಂದಿನ ದೇವಾಲಯದಲ್ಲಿ, ಅಂದರೆ ಲಾಡ್ಖನ್ (ಸೂರ್ಯ) ದೇವಾಲಯದ ತೆರೆದ ಹಜಾರವನ್ನು ಅತ್ಯದ್ಭುತವಾದ ಕೆತ್ತನೆಗಳುಳ್ಳ ಜಾಲರಿ ಪರದೆಗಳಿಂದ (ಜಾಲಂದ್ರಗಳು)ಮುಚ್ಚುವ ನಿರ್ಧಾರವನ್ನು ನಿರ್ಮಾತೃಗಳು ಮಾಡಿದರು. ಆದರೆ, ಕಂಭಗಳುಳ್ಳ ದ್ವಾರಮಂಟಪವನ್ನು (ಮುಖಮಂಟಪ) ಸೇರ್ಪಡೆ ಮಾಡಿ, ಮೇಲಿನ ಕೊಠಡಿಯನ್ನು ನಿರ್ಮಿಸಿ, ಚಪ್ಪಟೆಯಾದ ಛಾವಣಿಗೆ ಏರಿಕೆಯನ್ನು ನೀಡುವ ಮೂಲಕ, ಯೋಜನೆಯನ್ನು ವಿಸ್ತಾರಗೊಳಿಸಲಾಯಿತು. ತೆರೆದ ಮುಖಮಂಟಪಕ್ಕೆ ಮುಚ್ಚಿದ ಪ್ರದಕ್ಷಿಣಪಥ (ಸಂಧಾರ) ಹಾಗೂ ತೆರೆದ ಹಜಾರಗಳನ್ನು ಐಹೊಳೆಯ ಮೇಗುತಿ ದೇವಾಲಯದಲ್ಲಿ ನಿರ್ಮಿಸುವ ಮೂಲಕ, ಯೋಜನೆಯನ್ನು ಮತ್ತಷ್ಟು ವಿಸ್ತರಣೆ ಮಾಡಲಾಯಿತು. ಮೇಗುತಿ ದೇವಾಲಯವು ಕ್ರಿ.ಶ. ೬೩೪ಗೆ ಸೇರಿದುದೆಂದು ರವಿಕೀರ್ತಿಯ ಶಾಸನದಿಂದ ತಿಳಿದುಬಂದಿದ್ದು, ಪ್ರಯೋಗದ ಪ್ರಥಮ ಹಂತದ ಅಂತ್ಯವನ್ನು ಇದು ಸೂಚಿಸುತ್ತದೆ; ಈ ವೇಳೆಗೆ, ದೇವಾಲಯದ ಮುಖ್ಯ ಅಂಗಗಳಾದ ಗರ್ಭಗೃಹ, ಪ್ರದಕ್ಷಿಣಪಥ, ಸಭಾಮಂಟಪ ಹಾಗೂ ಮುಖಮಂಟಪಗಳು ರೂಪುಗೊಂಡಿದ್ದವು. ಆದರೆ, ಗೋಪುರವು ಇನ್ನೂ ನಿಷ್ಕೃಷ್ಟವಾಗದೇ ಉಳಿಯಿತು. ಅಲಂಕರಣಕ್ಕೆ ಸಂಬಂಧಿಸಿದಂತೆ, ಪ್ರಾಣಿಗಳು, ಮಾನವ ಚಿತ್ರಗಳು, ಹೂ ಬಳ್ಳಿ ಮತ್ತು

ಜ್ಯಾಮಿತೀಯ ವಿನ್ಯಾಸಗಳ ಉಬ್ಬುಚಿತ್ರಣದ ಶಿಲ್ಪಗಳನ್ನು ರಚಿಸುವ ಉದ್ದೇಶಕ್ಕಾಗಿ ಮೇಲ್ಭಾವಣಿ, ಬಾಗಿಲುವಾಡ ಕಂಬ ಹಾಗೂ ಅಧಿಷ್ಠಾನಗಳ ಮಾತ್ರ ಬಳಸಲಾಗುತ್ತಿತ್ತು.

ಬಾದಾಮಿಯ ಮೇಲಿ(Upper)ನ ಹಾಗೂ ಕೆಳಗಿ (Lower) ನ ಶಿವಾಲಯಗಳಂತಹ ಪಲ್ಲವ–ಪೂರ್ವ ಕಟ್ಟಡಗಳಲ್ಲಿ, ದೇವಾಲಯ ನಿರ್ಮಾಣದ ಚಾಲುಕ್ಯ ಪ್ರಯೋಗದ ಮುಂದಿನ ಹಂತವನ್ನು ಕಾಣಬಹುದು; ಇದರಲ್ಲಿ, ಒಟ್ಟಾರೆ ರಚನೆಯ ಅವಿಭಾಜ್ಯ ಅಂಗವಾಗಿ ದೇವಾಲಯದ ಗೋಪುರವನ್ನು ರೂಪಿಸುವ ಪ್ರಪ್ರಥಮ ಯತ್ನವನ್ನು ಮಾಡಲಾಯಿತು. ಗೋಡೆಗಳ ಮೇಲೆ ನೇರವಾಗಿ ಏರಿದ ಗೋಪುರದ ಅಸ್ಪಷ್ಟ ವಿಭಜನೆಯಲ್ಲಿ ತಲಚ್ಛಂದ ತತ್ವದ ಪ್ರಾರಂಭವನ್ನು ಕಾಣಬಹುದು. ಮೇಲಿನ ಹಾಗೂ ಕೆಳಗಿನ ಶಿವಾಲಯಗಳ ಟೊಳ್ಳು ಗೋಪುರಗಳಲ್ಲಿ, ಅತ್ಯುನ್ನತ ಸ್ತರದಲ್ಲಿ ಸ್ಪಷ್ಟನೆ ಇದೆ, ಆದರೆ ಕೆಳಗಿನ ಸ್ತರಗಳು ಮಸುಕಾಗಿವೆ. ಕ್ರಿ.ಶ. ೬೩೪ಕ್ಕೆ ಮುನ್ನ ಈ ಎರಡು ಶಿವಾಲಯಗಳನ್ನು ನಿರ್ಮಿಸಿದ ಕಾರಣದಿಂದ, ದಾಕ್ಷಿಣಾತ್ಯ ವಿಮಾನದ ವಿನ್ಯಾಸವನ್ನು ರೂಪಿಸುವಲ್ಲಿ, ಚಾಲುಕ್ಯ ಕಟ್ಟಡ ನಿರ್ಮಾತೃಗಳು ಮೊದಲಿಗರಾಗಿದ್ದರೆಂದು ಹೇಳಬಹುದು. ಕ್ರಿ.ಶ. ೬೩೪ರ ನಂತರ, ಪಲ್ಲವ ಪ್ರಭಾವದ ಅಡಿಯಲ್ಲಿ, ಮತ್ತಷ್ಟು ವಿಶಿಷ್ಟ ಕಲಾಪ್ರಯೋಗ ಕಾರ್ಯ ಕೈಗೊಂಡಂತೆ ತೋರುತ್ತದೆ. ಮೇಲ್ಕಟ್ಟಡದ ನಂತರದ ವಿಕಸನವು, ಉತ್ತರ ಶೈಲಿಯ (ರೇಖಾನಾಗರ) ವಕ್ರರೇಖೀಯ ಗೋಪುರವಾಗಿ ಮಾರ್ಪಾಡಿನ ಜಾಡನ್ನು ಕಂಡುಕೊಳ್ಳಲು, ಐಹೊಳೆಯ ಹುಚ್ಚಮಲ್ಲಿಗುಡಿ, ಪಟ್ಟದಕಲ್ಲಿನ ಸಂಗಮೇಶ್ವರದ ಹಾಗೂ ಮಹಾಕೂಟದ ಇತರ ಕೆಲವು ದೇವಾಲಯಗಳು ಮುಖ್ಯವಾದುವು. ಕ್ರಿ.ಶ. ೬ – ೭ನೆಯ ಶತಮಾನದಲ್ಲಿ ಐಹೊಳೆಯಲ್ಲಿ ಕೈಗೊಂಡ ಪ್ರಯೋಗಗಳಿಂದ ಮೂರನೆಯ ರೀತಿಯ ದೇವಾಲಯ, ಅಂದರೆ, ಹಿಂದಕ್ಕೆ ಇಳಿಜಾರಾಗುವ ಗೋಪುರಗಳ ನೆತ್ತಿಯ ಮೇಲಿರುವ ಆಮಲಕ ಹಾಗೂ ಕಳಸಗಳ, ಬಹುಅಂತಸ್ತಿನ ಗೋಪುರಗಳುಳ್ಳ, ಆದರೆ ಭೂಮಿಯ ಹಾಗೂ ಶುಕನಾಸಗಳಿಂದ ಮುಕ್ತವಾದ ಆಯತಾಕಾರದ ದೇಗುಲವು ಮೂಡಿತು. ಈ ರೀತಿಯ ದೇವಾಲಯಗಳಿಗೆ ಐಹೊಳೆಯ ಮಲ್ಲಿಕಾರ್ಜುನ ಹಾಗೂ ಗಳಗನಾಥ ದೇವಾಲಯಗಳು ಉತ್ತಮ ಉದಾಹರಣೆಯಾಗಿವೆ. ಈ ಶೈಲಿಯು ಹೊಯ್ಸಳ ಕಾಲದವರೆಗೂ ಉಳಿದು ಇದು ಹಾಸನ ಜಿಲ್ಲೆಯ ದೊಡ್ಡಗಡ್ಡವಳ್ಳಿಯ ಲಕ್ಷ್ಮೀದೇವಿ ದೇವಾಲಯದಲ್ಲಿ ದೃಷ್ಟಾಂತವಾಗಿದೆ.


ಈ ಮೂರು ಪ್ರಮುಖ ಶೈಲಿಯ ಜೊತೆಗೆ, ಐಹೊಳೆಯಲ್ಲಿ ಆಮಾತ್ರಾಕಾರದ ಅಥವಾ ಚಪ್ಪಟೆ ತುದಿಗಳ ಚಿಕ್ಕಿಗುಡಿ ಸಂಕೀರ್ಣವೂ ಇದೆ. ವಿಮಾನ ಮಾದರಿಯಲ್ಲಿ ಮತ್ತಷ್ಟು ಪರಿಷ್ಕರಣೆಯನ್ನು ಬಾದಾಮಿಯ ಭೂತನಾಥ ಗುಂಪಿನ ದೇವಾಲಯಗಳಲ್ಲಿ ಕಾಣಬಹುದಾಗಿದ್ದು ಐಹೊಳೆಯ ಹುಚ್ಚಮಲ್ಲಿಗುಡಿ ದೇವಾಲಯದಲ್ಲಿ ರೇಖಾನಾಗರದ ಉದ್ಭವವನ್ನು ಕಾಣಬಹುದು. ಮಹಾಕೂಟೇಶ್ವರ ದೇವಾಲಯವು, ಅಷ್ಟಭುಜೀಯ ಗುಮ್ಮಟವನ್ನು ಹೊಂದಿರುವ ಎರಡು–ಅಂತಸ್ತಿನ (ದ್ವಿತಂಳ) ವಿಮಾನದ ಉದಾಹರಣೆಯಾಗಿದೆ, ಅಲ್ಲೆ ಇರುವ ಸೇಂಗಮೇಶ್ವರವು ರೇಖಾನಾಗರದ ಉತ್ತಮ ಉದಾಹರಣೆಯಾಗಿದೆ. ಶಿಖರದಿಂದ ಚಾಚಿದ ಮಹಾನಾಸಿಕವು ಉತ್ತರ ಶೈಲಿಯ ಪ್ರಮುಖ



***Aihole temple, Bagalkot district***

ವೈಶಿಷ್ಟ್ಯವಾಗಿದ್ದು ಇದನ್ನು ದಾಕ್ಷಿಣಾತ್ಯ ವಿಮಾನ ಮಾದರಿಗಳಲ್ಲೂ ಅಳವಡಿಸಿಕೊಳ್ಳಲಾಗಿದೆ. ಅದೇ ರೀತಿಯಲ್ಲಿ, ಉತ್ತರದ ಮಾದರಿಗಳೊಂದಿಗೆ ಗುರುತಿಸಲಾಗುವ ಮುಚ್ಚಿದ ಪ್ರದಕ್ಷಿಣಪಥವನ್ನು (ಸಂಧಾರ), ದಕ್ಷಿಣದ ಚಾಲುಕ್ಯರ ಕೆಲವು ದೇವಾಲಯಗಳಲ್ಲೂ ಕಾಣಬಹುದು.

ತಮ್ಮ ಶಿಲ್ಪ ಸಂಪತ್ತಿಗಾಗಿ ಹೆಸರುವಾಸಿಯಾದ ಹೆಚ್ಚು ಗಮನಾರ್ಹವಾದ ಕಟ್ಟಡ ಮಾದರಿಗಳ ಪೈಕಿ, ವೈದಿಕಮತದ ಲಾಡಖಾನ್, ದುರ್ಗ, ಕುಂತಿ, ಮೇಗುತಿ, ಹುಚ್ಚಪ್ಪಯ್ಯ, ಚಿಕ್ಕಿ, ಹುಚ್ಚಪ್ಪಯ್ಯ ಮಠ ಮತ್ತು ರಾವಲಪಾಡಿ ಗುಹಾಲಯ ಹಾಗೂ ಮೇಗುತಿಯ ದಾರಿಯಲ್ಲಿರುವ ಬೌದ್ಧ ದೇವಾಲಯಗಳೆಲ್ಲವೂ ಐಹೊಳೆಯಲ್ಲಿವೆ. ಪ್ರಾರಂಭಿಕ ಚಾಲುಕ್ಯ ಕಲೆಯಲ್ಲಿ, ದೇವರ ಅರ್ಥ ಹಾಗೂ ರೂಪಕ್ಕೆ ಮೆರುಗು ನೀಡಲು, ವಿಶಾಲವಾದ ಗುಡಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಪ್ರಧಾನವಿಗ್ರಹದ ಸುತ್ತಲೂ ಉಪದೇವತಾ ವಿಗ್ರಹಗಳನ್ನು ಸ್ಥಾಪಿಸಿರುವುದರ ಉತ್ತಮ ಉದಾಹರಣೆಯನ್ನು ಬಾದಾಮಿಯ ತ್ರಿವಿಕ್ರಮ ಪಟ್ಟಿಕೆಯಲ್ಲಿ ಕಾಣಬಹುದು. ಪ್ರಾರಂಭಿಕ ಚಾಲುಕ್ಯ ಕಲೆಯನ್ನು, ಅದರ ಕಟ್ಟಡ ನಿರ್ಮಾಣ ಶೈಲಿ ಹಾಗೂ ಮೂರ್ತಿಶಿಲ್ಪದ ಪರಿವರ್ತನೆಯ ಮೂಲಕ ಗುರುತಿಸಲಾಗಿದೆ. ಮೂರ್ತಿಶಿಲ್ಪ ಸೂತ್ರಗಳ ವಿಕಸನವನ್ನು ಅಷ್ಟದಿಕ್ಪಾಲಕರ ಸ್ಥಾನದಿಂದ ತಿಳಿದುಕೊಳ್ಳಬಹುದು – ಇದಕ್ಕೆ ನಿರ್ದಿಷ್ಟವಾದ ಸ್ಥಾನಗಳನ್ನು ನೀಡುವವರೆಗೂ ಬದಲಾವಣೆಗೊಳ್ಳುತ್ತಲೇ ಇತ್ತು. ಈ ಮೊದಲು ಕಳಪೆಯಾಗಿ ಪ್ರತಿನಿಧಿತವಾದ ಕೆಲವು ಮೂರ್ತಿಶಿಲ್ಪದ ರೂಪಗಳಿಗೆ ಚಾಲುಕ್ಯ ಕಲಾವಿದರು ರಸಾಭಿಜ್ಞತೆಯಿಂದ ಕೂಡಿದ ಭವ್ಯತೆಯನ್ನು ನೀಡಿದರು. ಗೋವರ್ಧನಗಿರಿಧಾರಿಯಾಗಿ ಕೃಷ್ಣನು ಗುಪ್ತರ ಕಲೆಯ ಸ್ಕಂದನಿಗೆ ಹೋಲುವಂತಿದ್ದರೆ, ಆಭರಣ ಹಸು, ಇತ್ಯಾದಿಗಳ ಮೂಲಕ ವಿವರಗಳನ್ನು ಪರಿಚಯಿಸಲಾದ ಚಾಲುಕ್ಯ ಕಲೆಯಲ್ಲಿ, ಆತನನ್ನು ಹೆಚ್ಚು ಮಾನವ ರೂಪದಲ್ಲಿ ಪ್ರತಿನಿಧಿಸಲಾಗಿದೆ. ಚಾಲುಕ್ಯ ಕಲೆಯ ವಿವಿಧ ಹಂತಗಳಲ್ಲಿ ಕಂಡುಬರುವ, ಕಟ್ಟಡ ನಿರ್ಮಾಣ ಮಾದರಿ ಹಾಗೂ ಸ್ಥಳೀಯ ಧಾರ್ಮಿಕ ಅಗತ್ಯಗಳಿಗೆ ಅನುಸಾರವಾಗಿ, ಮೂರ್ತಿಶಿಲ್ಪದಲ್ಲಿ ಕೆಲವು ನಾವೀನ್ಯತೆಗಳನ್ನು ಪರಿಚಯಿಸಲಾಗಿದೆ. ಅಲ್ಲದೆ, ನಟರಾಜನಂತಹ ಕೆಲವು ಮಾದರಿಯ ಮೂರ್ತಿಶಿಲ್ಪ ಸೂತ್ರಗಳನ್ನು



ಚಾಲುಕ್ಯರು ವಿಕಸನಗೊಳಿಸಿದರೆಂದು ಗಮನಿಸಬಹುದಾಗಿದೆ. ಈ ಶಿಲ್ಪಗಳಲ್ಲಿ, ಗಣರು ಅಪರೂಪದ ಸ್ಥಾನಮಾನವನ್ನು ಪಡೆದುಕೊಂಡಿದ್ದರು. ಅವರ ಅಲೌಕಿಕ ಕ್ರಿಯೆ ಹಾಗೂ ಉಪಸ್ಥಿತಿಯೇ, ಗಂಭೀರ ಪರಿಸ್ಥಿತಿಯ ಉಪಶಮನವನ್ನು ಒದಗಿಸಿತು, ಇದನ್ನು ಬಾದಾಮಿಯ ಒಂದನೆಯ ಮಹಿಷಾಸುರಮರ್ಧಿನಿ ಪಟ್ಟಿಕೆಯಲ್ಲಿ ಗುಹೆಯ ಕಾಣಬಹುದು. ಆರಾಧಕರ ಮೆರವಣಿಗೆ, ಇತ್ಯಾದಿ ದೃಶ್ಯಗಳಿಗೆ ಈ ಕುಬ್ಜರು ಲವಲವಿಕೆಯನ್ನು ಒದಗಿಸಿದರು. ಮೃದುವಾಗಿ ಕಾಮೋತ್ಕಟರಾದ ಜೋಡಿಗಳ ಉದಾತ್ತೀಕರಣದಲ್ಲಿ, ದುರ್ಮೇತರ ಕಲೆಗೆ ಚಾಲುಕ್ಯರು ನೀಡಿದ ಕೊಡುಗೆಯು ಅಡಗಿದೆ. ಮೊದಲ ಬಾರಿಗೆ ಕಾಮಶಾಸ್ತ್ರೀಯ (ಕಾಮಪ್ರಚೋದಕ) ಭಂಗಿಗಳ ಚಿತ್ರಣದ ಶ್ರೇಯವು ಚಾಲುಕ್ಯರಿಗೆ ಸಲ್ಲುತ್ತದೆ, ಏಕೆಂದರೆ ಕಂಭ, ಉತ್ತರಾಂಗಗಳ ಪಟ್ಟಿ , ಇತ್ಯಾದಿಗಳ ಮೇಲೆ ಮಿಥುನದ ಶುಭ ಸಂಜ್ಞೆಯನ್ನು ಚಿತ್ರಿಸಲಾಗಿದೆ. ಪೂರ್ಣ ಘಟ, ಚೈತ್ಯ ಕಮಾನು, ಹಾರಗಳನ್ನು ಹೊತ್ತವರು ಹಾಗೂ ಮುತ್ತಿನ ಹಾರಗಳಂತಹ ಗುಪ್ತರ ಶೈಲಿಯ ಕಲಾ ಅಲಂಕಾರಗಳನ್ನು ಚಾಲುಕ್ಯ ಕಂಭ ಹಾಗೂ ಬೋದಿಗೆಗಳ ಮೇಲೆ ಉತ್ಕೃಷ್ಟವಾಗಿ ಕೆತ್ತಲಾಗಿದೆ.



ನಟರಾಜ ಐಹೊಳೆ

## ರಾಷ್ಟ್ರಕೂಟ ಶೈಲಿ

ನರ್ಮದಾ ನದಿತೀರದಿಂದ ಕಾವೇರಿ ನದಿಯ ದಡದವರೆಗೆ ಹರಡಿದ್ದ ಪ್ರಾರಂಭಿಕ ಚಾಲುಕ್ಯ ರಾಜ್ಯದ ಪತನದ ನಂತರ, ೮ನೆಯ ಶತಮಾನದ ಉತ್ತರಾರ್ಧದಲ್ಲಿ ಮಳಖೇಡದ ರಾಷ್ಟ್ರಕೂಟರು ಅಧಿಕಾರಕ್ಕೆ ಬಂದು, ಗುಜರಾತ್ ಸೇರಿದಂತೆ, ವಿಶಾಲವಾದ ಪ್ರದೇಶದ ಮೇಲೆ ಆಳ್ವಿಕೆ ನಡೆಸಿದರು. ವಾಸ್ತುಶಿಲ್ಪದಲ್ಲಿ, ಅವರು ಚಾಲುಕ್ಯ ಪರಂಪರೆಯನ್ನು ಅನುಸರಿಸಿದರು. ರಾಷ್ಟ್ರಕೂಟ ಶೈಲಿಯ ಅತ್ಯುತ್ತಮ ಉದಾಹರಣೆಯೆಂದರೆ, ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಎಲ್ಲೋರದಲ್ಲಿರುವ ಕೊರೆದು ಕಡಿದ ಕೈಲಾಸ ಪ್ರಸಿದ್ಧವಾದ ಗುಹಾ ದೇವಾಲಯ. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವನ್ನು ಅದಕ್ಕೆ ಮಾದರಿಯಾಗಿ ಇರಿಸಿಕೊಂಡಿದ್ದರು. ಬಹುತೇಕ ಚಾಲುಕ್ಯರ ವಿಷಯಗಳಾದ ಕೈಲಾಸವನ್ನು ಎತ್ತುತ್ತಿರುವ ರಾವಣ, ರಾವಣನ ಮೇಲೆ ಆಕ್ರಮಣ ಮಾಡುತ್ತಿರುವ ಜಟಾಯು, ಲಿಂಗೋದ್ಭವ ಶಿವ ಹಾಗೂ ಬಾಣಗಳ ಹಾಸಿಗೆಯ ಮೇಲೆ (ಶರಶ್ಯಯನ) ಮಲಗಿರುವ ಭೀಷ್ಮರ ಚಿತ್ರಗಳನ್ನು ಇಲ್ಲಿ ಮತ್ತಷ್ಟು ವೈಭವೋಪೇತವಾಗಿ ಹಾಗೂ ದೊಡ್ಡಪ್ರಮಾಣದಲ್ಲಿ ಕೆತ್ತಲಾಗಿದೆ. ಕರ್ನಾಟಕದ ಇಂದಿನ ಸರಹದ್ದುಗಳೊಗಿರುವ ಕೆಲವು ರಾಷ್ಟ್ರಕೂಟ ದೇವಾಲಯಗಳ ಪೈಕಿ, ಕೇವಲ ಎರಡನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದಾಗಿದೆ – ಅವುಗಳೆಂದರೆ, ಪಟ್ಟದಕಲ್ಲಿನ ಜೈನ ನಾರಾಯಣ ದೇವಾಲಯ ಹಾಗೂ ಧಾರವಾಡ ಜಿಲ್ಲೆಯ ಗದಗ್‌ನಲ್ಲಿರುವ ತ್ರಿಕೂಟೇಶ್ವರ ದೇವಾಲಯ. ತ್ರಿಕೂಟೇಶ್ವರ ದೇವಾಲಯವು ದೇವಾನು ದೇವತೆಗಳು, ರಾಜಮನೆತನದ ಮೆರವಣಿಗೆ, ಬೇಟೆಯ ದೃಶ್ಯ ಮುಂತಾದ ಕಿರು ಶಿಲ್ಪಗಳಿಂದ ವ್ಯಾಪಕವಾಗಿ ಅಲಂಕರಣಗೊಂಡಿದ್ದರೆ, ಪಟ್ಟದಕಲ್ಲಿನ ಜೈನ



ಕೈಟಬೇಶ್ವರ ದೇವಸ್ಥಾನ. ಕುಬಟೂರು, ಶಿವಮೊಗ್ಗ ಜಿಲ್ಲೆ

ದೇವಾಲಯದಲ್ಲಿ, ಬೃಹತ್ ಮುಖಮಂಟಪವೂ ಸೇರಿದಂತೆ, ಅದರ ವಿಸ್ತೃತ ಯೋಜನೆಗಾಗಿ ಹೆಸರುವಾಸಿಯಾಗಿದೆ. ಎಲಿಫೆಂಟಾದ ಕಲೆಯ ಮೇಲೆ ಪ್ರಾರಂಭಿಕ ಚಾಲುಕ್ಯ ಶೈಲಿಯು ಪ್ರಭಾವ ಬೀರಿದಂತೆ, ದ್ವಾರಕದಷ್ಟು ಪಶ್ಚಿಮಕ್ಕೂ ರಾಷ್ಟ್ರಕೂಟ ಶೈಲಿಯು ಪ್ರಭಾವ ಬೀರಿತು; ಇದು, ಇತ್ತೀಚೆಗೆ ಶೋಧಗಳಿಗೊಂಡಿರುವ ಕ್ರಿ.ಶ. ೮ – ೯ನೆಯ ಶತಮಾನಗಳು ದೇವಾಲಯ ಸಾಬೀತಾಗಿದೆ.

## ಕಲ್ಯಾಣದ ಚಾಳುಕ್ಯ ಶೈಲಿ

ಧಾರವಾಡ ಜಿಲ್ಲೆಯ ಲಕ್ಕುಂಡಿ, ಗದಗ, ಕುರುವಟ್ಟಿ, ಹಾವೇರಿ, ಹಾನಗಲ್ ಹಾಗೂ ಚೌಡದಾನಪುರ, ರಾಯಚೂರು ಜಿಲ್ಲೆಯ ಇಟಗಿ ಹಾಗೂ ಕುಕ್ಕನೂರು, ಬಳ್ಳಾರಿ ಜಿಲ್ಲೆಯ ಹಡಗಲಿ ಹಾಗೂ ಬಾಗಳಿ, ಶಿವಮೊಗ್ಗ ಜಿಲ್ಲೆಯ ಬಳ್ಳಿಗಾಮೆ ಹಾಗೂ ಚಿತ್ರದುರ್ಗ ಜಿಲ್ಲೆಯ ಹರಿಹರದಲ್ಲಿ, ಕಲ್ಯಾಣದ ಚಾಳುಕ್ಯ ಶೈಲಿಯ ಹೆಚ್ಚು ಹೆಸರುವಾಸಿಯಾದ ಸ್ಮಾರಕಗಳಿವೆ. ಈ ಶೈಲಿಯ ದೇವಾಲಯಗಳಲ್ಲಿ, ವಿಮಾನದ ಮುಂಭಾಗದಲ್ಲಿ ಹೊರಚಾಚುಗಳ ಸಂಖ್ಯೆಯಲ್ಲಿ ಮತ್ತಷ್ಟು ಹೆಚ್ಚಳವನ್ನು ತೋರಿಸಿ, ಇದರಿಂದ ಪ್ರಾರಂಭಿಕ ಚಾಲುಕ್ಯ ಶೈಲಿಯಲ್ಲಿ ಸಾಧ್ಯವಾದುದಕ್ಕಿಂತ ಕಟ್ಟಡ ನಿರ್ಮಾಣದ ಅಲಂಕಾರಗಳು ಹಾಗೂ ವಿಗ್ರಹ ಶಿಲ್ಪಗಳ ಯಥೇಚ್ಛ ಸೇರ್ಪಡೆಗೆ ಹೆಚ್ಚಿನ ಆಸ್ಪದ ಕಲ್ಪಿಸಲಾಯಿತು. ಪಟ್ಟದಕಲ್ಲಿನ ವಿರೂಪಾಕ್ಷ ಹಾಗೂ ಪಾಪನಾಥ ದೇವಾಲಯಗಳಲ್ಲಿ ಗಮನಕ್ಕೆ ಬರುವ, ಅಲಂಕಾರಕಂಬದೊಂದಿಗೆ ಗೋಡೆಯ ಮೇಲ್ಮೈಯಲ್ಲಿ ಅಂತರ ಬಿಡುವ ಪ್ರಾರಂಭಿಕ



ಲಕ್ಕುಂಡಿ ದೇವಾಲಯ, ಗದಗ್ ಜಿಲ್ಲೆ

ಚಾಲುಕ್ಯ ಶೈಲಿಯ ವಿಶಿಷ್ಟತೆಗಳನ್ನು ಮತ್ತಷ್ಟು ಮುಂದುವರಿಸಿ, ಸಂಪೂರ್ಣ ಕಟ್ಟಡಕ್ಕೆ ವಾಸ್ತುಶಿಲ್ಪದ ಮಹತ್ವದ ಕಾರ್ಯಕಾರಿ ಚೌಕಟ್ಟನ್ನು ಒದಗಿಸಲಾಯಿತು. ಭಿತ್ತಿಯಲ್ಲಿ ಅಲಂಕಾರಿಕ ಕಂಬಗಳ ಚೌಕಟ್ಟನ್ನು ಹೊಂದಿದ ಗೂಡನ್ನು ವಾಸ್ತುಶಿಲ್ಪದ ಚೌಕಟ್ಟಿನಲ್ಲಿ ಕೌಶಲ್ಯಪೂರ್ಣವಾಗಿ ಸೇರ್ಪಡೆ ಮಾಡಿ, ವಾಸ್ತುಶಿಲ್ಪದ ಅಲಂಕಾರಗಳ ನಡುವೆ ಎಲೆಚಿತ್ತಾರದ ಅಂಕುಡೊಂಕುಗಳನ್ನು ಸೇರ್ಪಡೆ ಮಾಡಲಾಯಿತು. ಮೇಲ್ಕಟ್ಟಡದ ಒಟ್ಟಾರೆ ಗಾತ್ರವು ಕಡಿಮೆಯಾಗಿ, ಉತ್ತರದ ದೇವಾಲಯಗಳಲ್ಲಿ ಇರುವಂತೆ ಲಂಬತ್ವದ ಪ್ರಭಾವವನ್ನು ನೀಡಲು, ಹಿಂಜಾರನ್ನು ರಚಿಸಲಾಯಿತು; ಅದೇ ರೀತಿ, ಅದರ ದಾಕ್ಷಿಣಾತ್ಯ ಮೂಲವನ್ನು ಸೂಚಿಸಲು, ಗೋಪುರದ ಅಡ್ಡಗೆರೆಯ ರೇಖೆಗಳು ಸ್ಫುಟವಾಗಿ ವ್ಯಕ್ತವಾಗುವಂತೆ, ಇತರ ಗುಣಲಕ್ಷಣಗಳನ್ನು ಹಾಗೆ ಉಳಿಸಿಕೊಳ್ಳಲಾಯಿತು. ಶಿಖರದ ಮುಂಭಾಗದ ಚಾಚುವಿಕೆಯು (ಮಹಾನಾಸಿಕ) ಉತ್ತರೀಯ ಒಲವನ್ನು ಸೂಚಿಸುತ್ತಿದ್ದು, ಇದಕ್ಕೆ ಉತ್ತಮ ಉದಾಹರಣೆ ಲಕ್ಕುಂಡಿಯ ನಾಗೇಶ್ವರ ದೇವಾಲಯ. ಕುರುವಟ್ಟಿಯ ದೇವಾಲಯದಲ್ಲಿ ಇರುವಂತೆ, ಅತ್ಯಂತ ಕಲಾತ್ಮಕವಾದ ಬಾಗಿಲವಾಡಗಳು, ಕಿರು ವಿಗ್ರಹ ಶಿಲ್ಪಗಳಿರುವ ಶಿಖರದ ಅಡ್ಡರೇಖೆಯ ವರಸೆಯ ಅಲಂಕರಣ, ಚಾಚುಪೀಠದ ಅಲಂಕರಣ ವಿಗ್ರಹಗಳು (ಕೀಚಕ), ಲಕ್ಕುಂಡಿ ಹಾಗೂ ಇಟಗಿಯ ದೇವಾಲಯಗಳ ಮೇಲ್ಛಾವಣಿ ಹಾಗೂ ಸೂರುಗಳಲ್ಲಿ ದೊಡ್ಡದಾದ, ಆದರೆ ಆಕರ್ಷಕವಾದ ದೇವತಾ ವಿಗ್ರಹಗಳು, ನಂತರದ ಚಾಳುಕ್ಯ ಶೈಲಿಯ ಅಚ್ಚೊತ್ತಿ ಮಾಡಿದ ಸಂಸ್ಕರಣ ಕಣ್ಸೆಳೆಯುವ ವೈಶಿಷ್ಟ್ಯವಾಗಿದೆ. ನಂತರದ ಚಾಳುಕ್ಯ ನಿರ್ಮಾತೃಗಳು, ಗರ್ಭಗುಡಿಯ ಪ್ರವೇಶ ದ್ವಾರವನ್ನು ಆಕರ್ಷಣೆಯ ಕೇಂದ್ರಬಿಂದುವಾಗಿ ಮಾಡಿ, ಬಾಗಿಲುವಾಡದ ಅಲಂಕಾರದತ್ತ ಹೆಚ್ಚಿನ ಗಮನವನ್ನು ನೀಡಿದರು. ಕೊನೆಯದಾಗಿ, ಧಾರವಾಡ ಜಿಲ್ಲೆಯ ಡಂಬಳದಲ್ಲಿರುವ ದೊಡ್ಡಬಸಪ್ಪ ದೇವಾಲಯದ ಅಸಾಧಾರಣತೆಯನ್ನು ಕುರಿತಾಗಿ ಇಲ್ಲಿ ಹೇಳಬೇಕು; ಇದು, ನಂತರದ ಚಾಲುಕ್ಯ ಶೈಲಿಯು ಹೊಯ್ಸಳ ಶೈಲಿಯಾಗಿ ಪರಿವರ್ತಿತಗೊಂಡ ದೇವಾಲಯದ ಹೆಗ್ಗುರುತಾಗಿದೆ. ಅದರ ವಿಮಾನ ಹಾಗೂ ಹಜಾರಗಳೆರಡೂ ನಕ್ಷತ್ರಾಕಾರದ ಯೋಜನೆಯನ್ನು ಹೊಂದಿವೆ. ಗೋಪುರದ 'ಕತ್ತಿನ'ವರೆಗೂ (ಗ್ರಿವ) ಅಡ್ಡಪಟ್ಟಿಗಳ ಸ್ವರೂಪದಲ್ಲಿ ತಳಹದಿಯ ಚಾಚುಗಳು ತಲುಪುವ ಮೂಲಕ ಮೆಟ್ಟಿಲೋಪಾದಿಯ ಮಾದರಿಯ ಶಿಖರವನ್ನು ಪಿರಮಿಡ್ ಈ ಮಾದರಿಯ ಎತ್ತರದ ಗೋಪುರದೊಂದಿಗೆ ಬದಲಿಸಲಾಗಿದೆ.

ಗೋಡೆಯ ಮೇಲ್ಭಾಗದಲ್ಲಿ ಹಾಗೂ ಶಿಖರದ ಚಾಚುವರಸೆಗಳಲ್ಲಿ ಬಹುತೇಕವಾಗಿ ಕಾಣಿಸಿಕೊಳ್ಳುವ ದೇವರ ಹಾಗೂ ದೇವಾಂಶಸಂಭೂತರ ಸೂಕ್ಷ್ಮ ಕೆತ್ತನೆಯ ಕಿರು ವಿಗ್ರಹಗಳೊಂದಿಗೆ ದೇವಾಲಯಗಳನ್ನು ಅಲಂಕರಿಸುವಲ್ಲಿ, ನಂತರದ ಚಾಳುಕ್ಯರು ಸಂಭ್ರಮಿಸಿದರು. ದೊಡ್ಡ ವಿಗ್ರಹಗಳು ವಾಸ್ತುಶಿಲ್ಪದ ಅಲಂಕಾರಗಳಿಂದ ಕೂಡಿದ ಅಲಂಕಾರಿಕಕಂಬದ ಗೂಡುಗಳಲ್ಲಿ ದೊಡ್ಡ ವಿಗ್ರಹಗಳನ್ನು ಕಾಣಬಹುದು – ಇದು ದೇವಾಲಯದ ನಾಗರ ಹಾಗೂ ದ್ರಾವಿಡ ರೂಪಗಳನ್ನು ಪ್ರತಿನಿಧಿಸುತ್ತದೆ. ಹಿಂದೂ ಹಾಗೂ ಜೈನ ದೇವಾಲಯಗಳೆರಡರಲ್ಲೂ, ವಿಗ್ರಹಗಳ ಅಲಂಕರಣಗಳು ಸೂಚ್ಯವಾಗಿದ್ದು, ವಸ್ತ್ರಾಲಂಕೃತವೆಂಬಂತೆ ಇರುವ ಅಂಶವು ನವುರಾಗಿದೆ . ಕುಬೇರ, ಚೌರಿ ಹೊತ್ತ ಪುರುಷರು, ಸರಸ್ವತಿ ಹಾಗೂ ಗಣೇಶನ ವಿಗ್ರಹಗಳನ್ನು ಇಲ್ಲಿ ವಿಶೇಷವಾಗಿ ಹೆಸರಿಸಬಹುದು. ಬಾಗಳಿಯ ಮಹಿಷಾಸುರಮರ್ಧಿನಿ ಹಾಗೂ ಸರಸ್ವತಿ, ಕುರುವಟ್ಟಿಯ ಚಾಚುಪೀಠದ ವಿಗ್ರಹಗಳು,

ಹಾವೇರಿಯ ಸಿದ್ದೇಶ್ವರ ದೇವಾಲಯದ ಮೇಲ್ಭಾವಣಿಯ ಪಟ್ಟಿಗಳು, ಬಳ್ಳಿಗಾವೆ ಹಾಗೂ ಲಕ್ಷ್ಮೇಶ್ವರದ ದೇವಾಲಯದ ಶಿಖರಗಳ ಕಿರು ದೇವತಾ ಕೆತ್ತನೆಗಳು ನಂತರದ ಚಾಳುಕ್ಯ ಕಲೆಯ ಶ್ರೀಮಂತಿಕೆಯ ಚಿತ್ರಣವನ್ನು ನೀಡುತ್ತದೆ.

## ಹೊಯ್ಸಳ ಶೈಲಿ

ದ್ವಾರಸಮುದ್ರದ (ಹಳೇಬೀಡು) ಹೊಯ್ಸಳ ಅರಸರು ಕಲೆ ಹಾಗೂ ಶಿಕ್ಷಣಗಳಿಗೆ ಮಹಾನ್ ಆಶ್ರಯದಾತರಾಗಿದ್ದರು.ದೇವಾಲಯಗಳ ನಿರ್ಮಿಸುವುದರ ಜೊತೆಗೆ ಅವುಗಳನ್ನು ಅತ್ಯುತ್ಕೃಷ್ಟವಾದ ಶಿಲ್ಪಗಳೊಂದಿಗೆ ಅಲಂಕರಿಸುವುದಲ್ಲದೆ, ಕಲೆ, ಸಂಗೀತ ಹಾಗೂ ನೃತ್ಯಗಳಿಗೆ ಪ್ರೋತ್ಸಾಹ ನೀಡಿದರು.ಹೊಯ್ಸಳ ನಿರ್ಮಾತೃಗಳು ನಿರ್ಮಾಣ ಕಾರ್ಯಕ್ಕಾಗಿ ನೀಲಿ ಅಥವಾ ಬೂದುಬಣ್ಣದ ಕ್ಲೋರೈಟಿಕ್ ಪದರಶಿಲೆ ಯನ್ನು ಬಳಸುತ್ತಿದ್ದು, ಇದು ಸೂಕ್ಷ್ಮ ಕೆತ್ತನೆಗೆ ಹಾಗೂ ಮೆರುಗು ನೀಡುವುದಕ್ಕೆ ಹೇಳಿ ಮಾಡಿಸಿದಂತಿತ್ತು. ಅವುಗಳ ಪೈಕಿ ಪ್ರಖ್ಯಾತ ದೇವಾಲಯಗಳು ಬೇಲೂರು, ಹಳೇಬೀಡು, ದೊಡ್ಡಗದ್ದವಳ್ಳಿ, ಅರಸೀಕೆರೆ, ಹೊಸಹೊಳಲು, ಕೋರಮಂಗಲ, ಅರಕೆರೆ, ಹಾರನಹಳ್ಳಿ, ನುಗ್ಗೇಹಳ್ಳಿ, ಮೊಸಳೆ ಹಾಗೂ ಅರಳುಗುಪ್ಪೆ, ಮೈಸೂರು ಜಿಲ್ಲೆಯ ಸೋಮನಾಥಪುರ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ, ಬಸರಾಳುಗಳಲ್ಲಿ ಕಾಣಬಹುದು. ಹೊಯ್ಸಳ ದೇವಾಲಯಗಳ ವಿಶಿಷ್ಟ ಅಂಶವೆಂದರೆ, ಕಟ್ಟಡ ನಿರ್ಮಾಣದಲ್ಲಿ ಶಿಲ್ಪಕಲೆಯ ಮೇಲುಗೈ. ಬಹುತೇಕ ಪ್ರತಿಯೊಂದು ಮೂಲೆ, ಗೂಡು ಅದಿಷ್ಟಾನ ಹಾಗೂ ಶಿಖರದ ಪ್ರತಿಯೊಂದು ಪಟ್ಟಿಕೆಯ ವರಸೆ ಹಾಗೂ, ಬಹುತೇಕ ಸಂಪೂರ್ಣ ಮೇಲ್ಛಾವಣಿಯಲ್ಲಿ, ಸೂಕ್ಷ್ಮವಾದ ಮಾನವ ವಿಗ್ರಹ, ದೇವರು, ದೇವಾಂಶಸಂಭೂತರು ಹಾಗೂ ಸಂಕೀರ್ಣವಾದ ಹೂ ಹಾಗೂ ಬಹುಕೋನಾಕಾರದ ವಿನ್ಯಾಸಗಳಿಂದ ಕೂಡಿದೆ.

ಅಲಂಕಾರಿಕ ಅಂಶ ಎದ್ದು ಕಾಣುತ್ತದೆ. ಯೋಜನೆ ತಳವಿನ್ಯಾಸ ಹಾಗೂ ಆದಿಷ್ಠಾನದ ಎತ್ತರಕ್ಕೆ ಸಂಬಂಧಿಸಿದಂತೆ ಹಾಗೂ ಏರಿಕೆಯಲ್ಲಿ, ನಂತರದ ಚಾಳುಕ್ಯ ದೇವಾಲಯಗಳಿಗಿಂತ ಹೊಯ್ಸಳ ದೇವಾಲಯಗಳು ವಿಭಿನ್ನತೆಯನ್ನು ಪ್ರದರ್ಶಿಸುತ್ತವೆ. ವಿಮಾನದ ಭೂ ವಿನ್ಯಾಸವು, ನಕ್ಷತ್ರದಾಕಾರವನ್ನು ಪಡೆಯಲು ಸರಣಿ ಬಿಂದುಗಳಾಗಿ ವ್ಯವಸ್ಥೆಗೊಳಿಸಲು ಚೌಕವನ್ನು, ನಕ್ಷತ್ರದಲ್ಲಿ ಅಗತ್ಯವಿರುವ ಬಿಂದುಗಳ ಸಂಖ್ಯೆಯ ಆಧಾರದ ಮೇಲೆ ಅವಲಂಬಿತವಾದ ಕೋನೀಯ ಸ್ಥಾನಕ್ರಮಣಗಳಿಗೆ ಅನುಗುಣವಾಗಿ, ಸಾಮಾನ್ಯ ಕೇಂದ್ರದ ಮೇಲೆ ತಿರುಗಿಸುವ ಮೂಲಕ ಪಡೆದುಕೊಳ್ಳಲಾಗಿದೆ. ದೇವಾಲಯವನ್ನು ಹೊತ್ತು ನಿಂತಿರುವ ವೇದಿಕೆಯು, ನಕ್ಷತ್ರಾಕಾರದ ಯೋಜನೆಯನ್ನು ನಿಕಟವಾಗಿ ಅನುಸರಿಸುತ್ತದೆ. ಈ ಎತ್ತರದ ಪಟ್ಟಿಕೆಯ ಮೇಲುಪಾಯವನ್ನು, ಪ್ರಾಣಿಗಳು, ಪುಷ್ಪ ವಿನ್ಯಾಸಗಳು ಹಾಗೂ ವಿಗ್ರಹ ಶಿಲ್ಪಗಳನ್ನುಳ್ಳ ಅಲಂಕಾರಿಕ ಪಟ್ಟಿಗಳಿಂದ ಅಲಂಕರಿಸಲಾಗಿದೆ. ಗೋಡೆಯ ಮೇಲ್ಮೈನ ಸಂಸ್ಕರಣವು ಸಮತಲವಾಗಿದ್ದು, ವಿಮಾನದ ಸುತ್ತಲೂ ವಿಗ್ರಹಗಳ ಮೂರು ಪಟ್ಟಿ ಹಾಗೂ ಹಜಾರದ ಸುತ್ತಲಿನ (ನವರಂಗ) ಭಿತ್ತಿಯು ಎರಡು ಪಟ್ಟಿಗಳನ್ನು ಹೊಂದಿದ್ದು ಶಿಖರದ ಮೂಲಕ ಹಾದು ಶಿಖರಾಲಂಕಾರವನ್ನು ತಲಪುವ ನಕ್ಷತ್ರ ಯೋಜನೆಯನ್ನು ಹೊತ್ತು, ಗೋಪುರದಲ್ಲಿ ಮೂಡಿದ ಅರೆಗೊಳವೆಯಾಕಾರವು ಮೇಲ್ಕಟ್ಟಡದಲ್ಲೂ ಮೂಡಿದೆ. ಆದರೆ, ಶಿಖರದ ಅಡ್ಡಗೆರೆಯ ವರಸೆಗಳು, ಅದರ ಉತ್ತರದ ಶೈಲಿಯನ್ನು ಕೊಂಚ ಕಡಿಮೆ ಮಾಡಿದೆ. ಹೊಯ್ಸಳ ಕಟ್ಟಡ ನಿರ್ಮಾಣದ ಕಂಭಗಳು ಚರಕಿ ಯಂತ್ರವನ್ನು ಉಪಯೋಗಿಸಿ ಮಾಡಿದ್ದು , ನಯವಾದ ಅಡ್ಡಗೆರೆಯ ವರ್ತುಲಾಕೃತಿಗಳು ಹಾಗೂ ಕೊರೆತಗಳನ್ನು ಹೊಂದಿದೆ. ಕೂಡುಗಂಬದ ತಳದಲ್ಲಿ ಗಂಟೆಯಾಕಾರದ ಅಲಂಕರಣವಿದ್ದು ಬೋದಿಗೆಯಲ್ಲಿ, ಸುಂದರವಾಗಿ ಕೆತ್ತನೆ ಮಾಡಿಕೂಡಿಸಲಾದ ವಿಗ್ರಹಗಳಿವೆ. ಸೋಮನಾಥಪುರದ ಕೇಶವ ದೇವಾಲಯವು ಅತ್ಯಂತ ಪರಿಪೂರ್ಣವಾಗಿದ್ದರೆ, ಬೇಲೂರಿನ ಚನ್ನಕೇಶವ ದೇವಾಲಯವು ಅತ್ಯಂತ ವಿಪುಲವಾಗಿ ಅಲಂಕೃತಗೊಂಡಿದೆ.

ಸುಂದರ ನಾರಿಯರು ಹಾಗೂ ಪ್ರಸನ್ನಚಿತ್ತ ದೇವರುಗಳಲ್ಲದೆ, ದೇವಾಲಯದ ಪ್ರತಿಯೊಂದು ಭಾಗವೂ ಪ್ರಾಣಿ ಹಾಗೂ ಸಸ್ಯಾಲಂಕಾರಗಳಿಂದ ಮನಮೋಹಕವಾಗಿ ಅಲಂಕೃತಗೊಂಡಿರುವ ಹೊಯ್ಸಳ


ಸೋಮನಾಥಪುರ ದೇವಾಲಯ ಮೈಸೂರು ಜಿಲ್ಲೆ

ದರ್ಪಣ ಸುಂದರಿ, ಹಳೇಬೀಡು ದೇವಸ್ಥಾನ ಹಾಸನ ಜಿಲ್ಲೆ



ದೇವಾಲಯದ ಪ್ರತಿಯೊಂದು ಭಾಗವೂ ಸದಭಿರುಚಿಯಿಂದ ಕೂಡಿದ ಅಲಂಕರಣಗಳಿಂದ ಕೂಡಿದೆ. ಬೇಲೂರಿನ ಚನ್ನಕೇಶವ ದೇವಾಲಯವನ್ನು ಹೊಯ್ಸಳ ಕಲೆಯ ಉತ್ತಮ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಮೇಲು ಪಾಯದ ಪಟ್ಟಿಕೆಯ ವರಸೆಗಳಲ್ಲಿ ಒಂದರ ನಂತರ ಒಂದರಂತೆ ಬರುವ ಆನೆಗಳು, ಸುರುಳಿಯಲಂಕಾರ, ನರ್ತಕರು, ಸಂಗೀತಗಾರರು ಹಾಗೂ ಲತಾಕುಂಜ ದ ಅಡಿಯಲ್ಲಿ ನಿಂತ ಸ್ತ್ರೀ ವಿಗ್ರಹಗಳ ಸಾಲುಗಳಿಂದ ಅಲಂಕೃತಗೊಂಡಿದೆ. ಅದರ ಮೇಲ್ಭಾಗದಲ್ಲಿ ಜಾಲರಿಯ ಪರದೆಗಳು ಹಾಗೂ ಕಂಭಗಳ ಮೇಲ್ಭಾಗದಲ್ಲಿ ಆಕರ್ಷಕ ಭಂಗಿಗಳಲ್ಲಿ ನಿಂತ, ಮದನಿಕೆಯರು ಎಂದು ಪ್ರಸಿದ್ಧಿ ಪಡೆದ ಚಾಚುಪೀಠದ ವಿಗ್ರಹಗಳನ್ನು ಕಾಣಬಹುದು. ಅಗತ್ಯವಾದ ಸೂಕ್ಷ್ಮತೆ ಹಾಗೂ ಅಗಾಧತೆಗಳ ನಡುವಣ ಸಾಮರಸ್ಯ ಸಾಧಿಸಿದ ಹಾಗೂ ಮಾದರೀಕರಣದ ಸೂಕ್ಷ್ಮತೆ ಹೊಂದಿದ ಈ ಚಾಚುಪೀಠದ ವಿಗ್ರಹಗಳು, ಹೊಯ್ಸಳ ಕಲೆಯ ಮೇರು ಕೃತಿಗಳಾಗಿವೆ. ಹೊಯ್ಸಳ ಕಲಾವಿದರು, ಪ್ರಕೃತಿ, ಪುರುಷ ಹಾಗೂ ದೇವರು ನಿರಂತರತೆಯ ಒಂದು ಭಾಗವೆಂದು ಒತ್ತಿ ಹೇಳಿದ್ದು, ಮೇಲುಪಾಯದಲ್ಲಿರುವ ಅಗಲವಾದ ಅಲಂಕರಣ ಪಟ್ಟಿಗಳಲ್ಲಿ ಮಾತ್ರವಲ್ಲದೆ, ಅದನ್ನು ಕೈಲಾಸವನ್ನು ಅಲುಗಾಡಿಸುತ್ತಿರುವ ರಾವಣನಂತಹ ದೃಶ್ಯಗಳಲ್ಲೂ ಕಾಣಬಹುದು. ಸಂಹಾರಮೂರ್ತಿಗಳಾದ ಗಜಾಸುರಮರ್ದನ ಹಾಗೂ ನರಸಿಂಹರ ಪುನರಾವರ್ತನೆಯನ್ನು ಮಾಡುವ ಮೂಲಕ, ಅನುಭವಾತೀತ ಸ್ತರದಲ್ಲಿ ದುಷ್ಟತೆಯ ನಾಶವನ್ನು ಒತ್ತಿ ಹೇಳಬೇಕೆಂದೂ, ದೇವರ ಕೋಪಾವೇಶಗಳ ಲ್ಲವೆಂಬುದನ್ನು ಕಲಾವಿದನು ಪ್ರಜ್ಞಾಪೂರ್ವಕವಾಗಿ ನಿರೂಪಿಸಲು ಯತ್ನಿಸಿದ್ದಾನೆ. ಹೊಯ್ಸಳ ಕಲೆಯಲ್ಲಿ ಸಂಹಾರಮೂರ್ತಿಗಳು ಮೃದುವಾಗಿರುವುದಕ್ಕೆ ಇದೇ ಕಾರಣ. ಸೂಕ್ಷ್ಮಾತಿಸೂಕ್ಷ್ಮ ವಿವರಗಳ ಕೆತ್ತನೆ ಮಾಡುವಲ್ಲಿ ಹೊಯ್ಸಳ ಕಲಾವಿದರು ನಿಷ್ಣಾತರಾಗಿದ್ದರು.

## ವಿಜಯನಗರ ಶೈಲಿ

ಕೃಷ್ಣಾ ನದಿ ದಡದಿಂದ ಕನ್ಯಾಕುಮಾರಿಯವರೆಗೂ ಹರಡಿಕೊಂಡಿದ್ದ ಸಿರಿವಂತ ಹಾಗೂ ಬಲಿಷ್ಠ ಸಾಮ್ರಾಜ್ಯವನ್ನು ವಿಜಯನಗರದ ಅರಸರು ನಿರ್ಮಾಣ ಮಾಡಿದರು. ಕಲೆಯ ಮಹಾನ್ ಪೋಷಕರಾಗಿದ್ದು, ಮಹಾದ್ವಾರಗಳ ಮೇಲಿನ ಅಲಂಕಾರಿಕತೆ, 'ವಿಜೃಂಭಣೆ' ಬೃಹತ್ ಗೋಪುರಗಳು, ಸೃಜನಶೀಲವಾಗಿ ಕೆತ್ತನೆಗೊಂಡ ಕಂಭಗಳು ಹಾಗೂ ಪಟ್ಟಿಗಳುಳ್ಳ ವ್ರತಾಚರಣೆ ನಡೆಸುವ ಸಭಾಂಗಣಗಳ ವ್ಯಾಪಕತೆಗಾಗಿ ಹೆಸರುವಾಸಿಯಾದ ನೂತನ ಶೈಲಿಯ ಕಟ್ಟಡ ವಿನ್ಯಾಸವನ್ನು ಅವರು ರೂಪಿಸಿದರು. ಪೌರಾಣಿಕ ಪ್ರಾಣಿಗಳು ಹಾಗೂ ಸವಾರರನ್ನು ಹೊತ್ತ ಸಂಯುಕ್ತಶೈಲಿಯ ಕಂಭಗಳು ವಿಜಯನಗರದ ಅರಸರ ಅನನ್ಯ ಕೊಡುಗೆಯಾಗಿದೆ. ಮುಖ್ಯ ದೇವರ ಸಹಧರ್ಮಿಣಿಯರ ಅವರು ಪ್ರತ್ಯೇಕ ಗುಡಿಯನ್ನು ನಿರ್ಮಾಣ ಮಾಡಿದುದಲ್ಲದೆ, ಎತ್ತರದ ಗೋಡೆಯ ಪ್ರಾಕಾರಗಳಿರುವ ಉಪಗುಡಿಗಳನ್ನೂ ನಿರ್ಮಾಣ ಮಾಡಿದರು – ಹಂಪೆಯ ಹಜಾರ ರಾಮನ ದೇವಾಲಯದಲ್ಲಿ ಕಂಡುಬರುವ ಜಾನಪದ ನೃತ್ಯ, ರಾಜಪರಿವಾರದ ಬೇಟೆ, ವಿಜಯದ ಮೆರವಣಿಗೆ, ಇತ್ಯಾದಿ ದೃಶ್ಯಗಳಿಂದ ಕೂಡಿದ ವಿಸ್ತೃತ ಅಲಂಕರಗಳಿಲ್ಲದೆ ರಾಮಾಯಣದ ದೃಶ್ಯಗಳನ್ನು ಈ ದೇವಾಲಯದಲ್ಲಿ ಕಾಣಬಹುದು, ಅದೇ ರೀತಿ ಹಂಪಿಯ ಕೃಷ್ಣ ಹಾಗೂ ವಿಠ್ಠಲ



ವಿಜಯ ವಿಠ್ಠಲ ದೇವಾಲಯ ಹಂಪಿ.

ದೇವಾಲಯಗಳಲ್ಲಿ ಭಾಗವತದ ಕಥನ ಶಿಲ್ಪಗಳನ್ನು ನೋಡಬಹುದು. ವಿಠ್ಠಲ ದೇವಾಲಯದ ಸಂಗೀತದ ಕಂಭಗಳ ಬೆರಳುಗಳೊಂದಿಗೆ ಮೃದುವಾಗಿ ಮೀಟಿದಾಗ, ಅದರಿಂದ ಸಂಗೀತದ ವಿವಿಧ ಸ್ವರಗಳು ಉತ್ಪತ್ತಿಯಾಗುತ್ತವೆ.

ವಿಜಯನಗರದ ಕಲೆಯಲ್ಲಿ ಗಟ್ಟಿಯಾದ ಗ್ರಾನೈಟ್ ಕಲ್ಲನ್ನು ಬಳಕೆ ಮಾಡಿರುವುದರಿಂದ, ಸೂಕ್ಷ್ಮ ಕೆತ್ತನೆಗಳನ್ನು ಮಾಡಲು ಸಾಧ್ಯವಾಗಲಿಲ್ಲ, ಆದರೆ ಲಕ್ಷ್ಮೀನರಸಿಂಹ ಹಾಗೂ ಗಣೇಶನಂತಹ (ಸಾಸಿವೆಕಾಳು ಹಾಗೂ ಕಡಲೇಕಾಳು ಗಣೇಶ) ಬೃಹತ್ ಏಕಶಿಲಾ ಶಿಲ್ಪಗಳಲ್ಲದೆ, ಕಡಿಮೆ ಪ್ರಮಾಣದ ಉಬ್ಬುಚಿತ್ರಣದ ಶಿಲ್ಪಗಳು ಚೈತನ್ಯ ಹಾಗೂ ಓಜಸ್ಸುಗಳಿಂದ ತುಂಬಿವೆ – ಈ ರೀತಿಯ ತತ್ವವು, ವಿಜಯನಗರ ಸಾಮ್ರಾಜ್ಯದ ಮಹಾತ್ತತೆಯನ್ನು ಜನರ ಮೇಲೆ ಅಚ್ಚೊತ್ತುವ ಉದ್ದೇಶದಿಂದ ಮಾಡಲಾಗಿದೆಯೆಂದು ಸೂಚಿಸುತ್ತದೆ. ಶಿಲ್ಪಗಳಲ್ಲಿನ ಪಡೆಗಳ ಪಥಸಂಚಲನವೂ ಸಾಮ್ರಾಜ್ಯದ ಬಲವನ್ನು ಸೂಚಿಸುತ್ತದೆ. ವಿಜಯನಗರದ ಅರಸರು ಜಾನಪದ ಕಲೆಯನ್ನು, ಅದರಲ್ಲೂ ಹೋಳಿಯಲ್ಲಿ ಬಣ್ಣದ ಓಕುಳಿಯನ್ನು ಚೆಲ್ಲುವಂತಹ ಉತ್ಸವ ಹಾಗೂ ಜಾನಪದ ನೃತ್ಯಗಳನ್ನು ಉತ್ತೇಜಿಸುವಲ್ಲಿ ವಿಶೇಷ ಒಲವನ್ನು ತೋರಿದರು. ಮಹಾಕಾವ್ಯಗಳ ದೃಶ್ಯಗಳನ್ನು ಹಲವಾರು ದೇವಾಲಯಗಳಲ್ಲಿ, ಅದರಲ್ಲೂ ವಿಶೇಷವಾಗಿ ಹಜಾರ ರಾಮನ ದೇವಾಲಯದಲ್ಲಿ ಪದೇಪದೇ ಪುನರಾವರ್ತಿಸಲಾಗಿದೆ. ವಿಜಯನಗರದ ಕಲಾವಿದರು ಪ್ರಾಣಿಶಿಲ್ಪಗಳಿಗೆ ವಿಶೇಷ ಗಮನವನ್ನು ನೀಡಿದರು. ಹಂಪಿ, ಶ್ರೀರಂಗಂ ಹಾಗೂ ವೆಲ್ಲೂರು ದೇವಾಲಯಗಳ ಸಂಯುಕ್ತ ಕಂಭಗಳಲ್ಲಿ ನಿಜವಾದ ಹಾಗೂ ಪೌರಾಣಿಕ ಪ್ರಾಣಿಗಳ ವಿಗ್ರಹಗಳನ್ನು ಕಾಣಬಹುದಾಗಿದೆ.

## ವರ್ಣಕಲೆ

ಕರ್ನಾಟಕದ ಪ್ರಾರಂಭಿಕ ವರ್ಣಚಿತ್ರಗಳು ಇತಿಹಾಸ–ಪೂರ್ವ ಯುಗಕ್ಕೆ, ಅಂದರೆ ಸುಮಾರು ಕ್ರಿಪೂ. ೨೦೦೦ – ೧೦೦೦ಕ್ಕೆ ಸೇರಿದಾಗಿವೆ. ಇತಿಹಾಸ–ಪೂರ್ವ ಜನರ ವಾಸಸ್ಥಾನವಾಗಿದ್ದ ಕಾಲದ ಚಾಚಿಕೊಂಡಿರುವ ಶಿಲಾಶ್ರಯಗಳ ಅಡಿಯಲ್ಲಿ ಪ್ರಾಣಿ ಹಾಗೂ ಮಾನವ ಚಿತ್ರಗಳೇ ಮುಂತಾದವನ್ನು ಪ್ರಾತಿನಿಧಿಕವಾಗಿ ಕೆತ್ತಲಾಗಿದೆ. ಇತಿಹಾಸ–ಪೂರ್ವ ಮಾನವನ ಕಲಾ ಪಳೆಯುಳಿಕೆಗಳನ್ನು ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಕೊಪ್ಪಳ, ರಾಯಚೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾಣಬಹುದು. ಹಿರೇಬೆಣಕಲ್, ಪಿಕ್ಲಿಹಾಳ, ಮುಂತಾದ ಇತಿಹಾಸ–ಪೂರ್ವ ಕಾಲದಲ್ಲಿ ತಾಣಗಳಲ್ಲಿ ಬಂಡೆಗಳ ಮೇಲೆ ಆಯುಧಗಳನ್ನು ಹಿಡಿದ ಬೇಟೆಗಾರರು, ಕುದುರೆ ಸವಾರರು, ಗೂಳಿಗಳೇ, ಮೊದಲಾದ ರೇಖಾಚಿತ್ರಗಳನ್ನು ಕಾಣಬಹುದಾಗಿದೆ. ಬ್ರಹ್ಮಗಿರಿ, ಚಂದ್ರವಳ್ಳಿ, ಹೆಮ್ಮಿಗೆ, ಹೆರಕಲ್, ಮಸ್ಕಿ ಹಾಗೂ ಬೆಂಗಳೂರಿನಲ್ಲಿ ಬಣ್ಣಬಣ್ಣದ ರೇಖಾಚಿತ್ರಗಳಿರುವ ಮಣ್ಣಿನ ಮಡಕೆಗಳು ಹೇರಳವಾಗಿ ದೊರೆತಿವೆ. ಸಮಕಾಲೀನ ಸಾಹಿತ್ಯ ಹಾಗೂ ಶಾಸನಗಳಲ್ಲಿ ವರ್ಣಚಿತ್ರ ಕಲೆಯನ್ನೂ ಹಾಗೂ ಅದರ ಅಸ್ತಿತ್ವವನ್ನು ಯಥೇಚ್ಛವಾಗಿ ಉಲ್ಲೇಖಿಸಲಾಗಿದೆ. ಕರ್ನಾಟಕದಲ್ಲಿ ರಾಜಾಶ್ರಯದಲ್ಲಿ ರಚಿಸಲ್ಪಟ್ಟ ವರ್ಣಚಿತ್ರಗಳ ಪ್ರಾಚೀನ ಉದಾಹರಣೆಯನ್ನು ಚಾಲುಕ್ಯ ಅರಸನಾದ ಮಂಗಳೇಶನ ಕಾಲಕ್ಕೆ ಗುರುತಿಸಬಹುದಾಗಿದ್ದು ಆತನ ಕಾಲದ ವರ್ಣಚಿತ್ರಗಳ ಕುರುಹುಗಳು ಬಾದಾಮಿಯ ಮೂರನೆಯ ಗುಹೆಯಲ್ಲಿ ಉಳಿದಿದೆ.

ಐತಿಹಾಸಿಕ ಕಾರಣಗಳಿಂದ, ಕರ್ನಾಟಕದ ಈ ವರ್ಣಚಿತ್ರ ಸಂಪ್ರದಾಯದ ನಿರಂತರತೆಯಲ್ಲಿ ಅಂತರವಿದ್ದು, ಹೊಯ್ಸಳ ಕಾಲಕ್ಕೆ ಸೇರಿದ ಮೂಡುಬಿದ್ರಿಯಲ್ಲಿನ ಸಚಿತ್ರ ಧವಳ ಹಸ್ತಪ್ರತಿಗಳನ್ನೂ ಕಾಣಬಹುದು. ಅದೇ ವಿಷಯಗಳನ್ನು ಚಿತ್ರಿಸುವ ಗುಜರಾತಿನ ಕಲ್ಪಸೂತ್ರ ಚಿತ್ರಕಲೆಗಿಂತ, ಈ ರೇಖಾಚಿತ್ರಗಳ ಪರಿಸ್ಥಿತಿ ಹಾಗೂ ಭಂಗಿಗಳು ವಿಭಿನ್ನವಾಗಿವೆ. ಈ ಶೈಲಿಯು ಸ್ಪಷ್ಟವಾಗಿ ಸ್ಥಳೀಯವಾಗಿದ್ದು, ಹೊಯ್ಸಳ ಶಿಲ್ಪಗಳಲ್ಲಿನ ಅಲಂಕರಣೆಗಳ ಕಲಾತ್ಮಕ ಅನುಕರಣೆಯನ್ನು ಬಿಂಬಿಸುತ್ತದೆ. ರುದ್ರಭಟ್ಟನಂತಹ ಕನ್ನಡ ಕವಿಗಳು ಭಾವಚಿತ್ರ ಹಾಗೂ ವರ್ಣಚಿತ್ರಗಳ ಉಲ್ಲೇಖವನ್ನು ಮಾಡಿದ್ದಾರೆ. ಸಾಮ್ರಾಟ ಮೂರನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಈ ಕಲೆಗೆ ಸಂಬಂಧಿಸಿದಂತೆ ಒಂದು ವಿಭಾಗವೇ ಇದೆ.

ವಿಜಯನಗರ ಕಾಲದ ಚಿತ್ರಕಲೆಯ ಅಧ್ಯಯನವನ್ನು ಮಾಡಿದಾಗ, ಭಿತ್ತಿ ಚಿತ್ರಕಲೆಯು ಬೃಹತ್ ಪ್ರಮಾಣದಲ್ಲಿ ಆಚರಣೆಯಲ್ಲಿತ್ತೆಂದು ತಿಳಿದು ಬರುತ್ತದೆ. ಇಂತಹ ಮೊದಮೊದಲಿನ ಉದಾಹರಣೆಗಳನ್ನು ಹಂಪಿಯ ವಿರೂಪಾಕ್ಷ ದೇವಾಲಯದ ಛಾವಣಿಯ ಮೇಲೆ ಕಾಣಬಹುದು. ಕರ್ನಾಟಕದ ಚಿತ್ರಕಲೆಯ ಕೂಲಂಕಷ ಅಧ್ಯಯನವು ಅವು ಆ ಕಾಲದ ಜನಜೀವನವನ್ನು ಪ್ರತಿಬಿಂಬಿಸುವ ಬದಲು, ಚಿತ್ರರಚನಾಕಾರರು ಸಾಂಪ್ರದಾಯಿಕ ಪರಿಸ್ಥಿತಿಗಳಿಗೆ ವಾಸ್ತವಿಕತೆಗೆ ದೂರವಾದ ಭಂಗಿಗಳನ್ನು, ಆಗಮಗಳ ಕಟ್ಟುನಿಟ್ಟಾದ ರೂಪುರೇಷೆಗಳಿಗೆ ಬದ್ಧವಾಗಿ ಮಾಡಿರುವುದು ಗೋಚರವಾಗುತ್ತದೆ. ಈ ಚಿತ್ರಕಲೆಯು, ಇಂದಿಗೂ ಹೇರಳವಾಗಿ ಕಾಣುವ ಶಿಲ್ಪಗಳ ಚಿತ್ರಾತ್ಮಕ ಆವರ್ತನೆಗಳೆಂದು ತೋರುತ್ತದೆ. ಜಾತ್ಯಾತೀತ ವಸ್ತು ವಿಷಯಗಳೂ ಸಹ ಈ ವಾಸ್ತವಿಕತೆಗೆ ದೂರವಾದ ಭಂಗಿಗಳನ್ನು ಅನುಸರಿಸಿವೆ. ಕರ್ನಾಟಕದ ಬಹುತೇಕ ದೇವಾಲಯಗಳ ಈ ರೀತಿಯ ಭಿತ್ತಿ ಚಿತ್ರಗಳಿಂದ ಅಲಂಕರಣಗೊಂಡಿರುವ ಸಾಧ್ಯತೆ ಇದೆ. ಸಿ. ಹಯವದನ ರಾಯರು ಸಂಪಾದಿಸಿದ/ಪರಿಗ್ಗಾಸೆ ಮೈಸೂರು ಗೆರಿಟಿಯರ್ ಹಳೆಯ ಮೈಸೂರು ಪ್ರಾಂತದಲ್ಲಿರುವ ಗೋಡೆಚಿತ್ರಗಳುಳ್ಳ ಅನೇಕ ದೇವಾಲಯಗಳನ್ನು ಹೆಸರಿಸಿದೆ. ಅವುಗಳ ಪೈಕಿ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯ, ಸೀಬಿಯ ನರಸಿಂಹ ದೇವಾಲಯ, ಶ್ರವಣಬೆಳಗೊಳದ ಜೈನ ಮಠ, ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯ, ಹಂಪಿಯ ವಿರೂಪಾಕ್ಷ ದೇವಾಲಯ, ಮೈಸೂರಿನ ಪ್ರಸನ್ನಕೃಷ್ಣಸ್ವಾಮಿ, ಕೃಷ್ಣ ಹಾಗೂ ವರಾಹ ದೇವಾಲಯ, ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯ ಹಾಗೂ ಸಾಲಿಗ್ರಾಮದ ಜೈನ ದೇವಾಲಯ ಉಲ್ಲೇಖಾರ್ಹ. ಶ್ರೀರಂಗಪಟ್ಟಣದ ದರಿಯಾ ದೌಲತ್, ಮೈಸೂರಿನ ಜಗನ್ಮೋಹನ ಅರಮನೆ, ಬಿಜಾಪುರ, ನರಗುಂದ, ನಿಪ್ಪಾಣಿ


ಭಿತ್ತಿ ವರ್ಣಚಿತ್ರ ದರಿಯಾದೌಲತ್, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ

ಹಾಗೂ ಕಮತಗಿಗಳಲ್ಲಿರುವ ಮಹಲುಗಳು, ಧಾರವಾಡದ ಬಳಿಯಿರುವ ಅಮ್ಮಿನಭಾವಿ, ಹಳಿಯಾಳದ ಬಳಿಯಿರುವ ಬಿ.ಕೆ. ಹಳ್ಳಿಯ ರಾಮನ ದೇವಾಲಯ, ರಾಯಚೂರು ಹಾಗೂ ಗುಳೇದ ಗುಡ್ಡಗಳಲ್ಲಿರುವ ಖಾಸಗಿ ಮನೆಗಳಲ್ಲಿರುವ ವರ್ಣಚಿತ್ರಗಳು.

ವಿಜಯನಗರ ಉಲ್ಲೇಖಾರ್ಹ ಕಾಲದಉತ್ತರಾರ್ಧ ಅವಧಿಯಿಂದ ವರ್ಣಚಿತ್ರಕಲೆಯು ಇಬ್ಭಾಗವಾಗಿರುವಂತೆ ತೋರುತ್ತದೆ. ಆಗಮಗಳಿಗೆ ಬದ್ಧವಾದ ಪುರಾತನ ಸಂಪ್ರದಾಯವನ್ನು ವಿಜಯನಗರದ ಅರಸರು ಹಾಗೂ ಅವರ ಸಾಮಂತರು ಅನುಸರಿಸಿದರೆ, ಬಿಜಾಪುರ, ಗುಲ್ಬರ್ಗಾ ಹಾಗೂ ಬೀದರ್‌ನ ಸುಲ್ತಾನರು, ದಖ್ಖನಿ ಶೈಲಿಯೆಂಬ ಪ್ರತ್ಯೇಕ ಶೈಲಿಯ ಅಭಿವೃದ್ಧಿಗೆ ಕಾರಣರಾದರು.ಈ ಶೈಲಿಯ ಅತ್ಯುತ್ತಮ ಕಲಾಕೃತಿಗಳು ಬಿಜಾಪುರದಲ್ಲಿ ಮೂಡಿತು. ಈ ಶೈಲಿಯು ಮುಘಲ್ ಶೈಲಿಯಿಂದ ಬಹಳಷ್ಟು ಪ್ರಭಾವಿತವಾದರೂ, ಬಲವಾದ ಸ್ಥಳೀಯ ಪ್ರಭಾವಗಳೂ ಕಂಡು ಬರುತ್ತವೆ.

ವಿಜಯನಗರದಲ್ಲಿ ಅಭಿವೃದ್ಧಿಗೊಳಿಸಲಾದ ಪುರಾತನ ಶೈಲಿಯನ್ನು ಕರ್ನಾಟಕದ ದಕ್ಷಿಣ ಭಾಗಗಳಲ್ಲಿ ಮುಂದುವರಿಸಲಾಯಿತು. ವಿಜಯನಗರದ ಪತನದ ನಂತರ, ದಕ್ಷಿಣದ ವಿವಿಧ ಭಾಗಗಳಿಗೆ, ವಿಜಯನಗರದ ಅರಸರ ಆಸ್ಥಾನವು ವಲಸೆ ಹೋಯಿತು. ರಾಜ ಒಡೆಯರ್‌ರವರ ಆಶ್ರಯದಲ್ಲಿ, ಬಹಳ ಕಲಾವಿದರು ನೆಲೆಸಿದರು. ಶ್ರೀರಂಗಪಟ್ಟಣದ ದರಿಯಾ ದೌಲತ್‌ನ ಕಂಭ, ಗೋಡೆ, ಛಾವಣಿ, ಇತ್ಯಾದಿಗಳ ಮೇಲಿನ ವರ್ಣಚಿತ್ರಗಳು ವಿವಿಧ ವಸ್ತುವಿಷಯಗಳನ್ನು ಹೊಂದಿವೆ. ಈ ಚಿತ್ರಗಳನ್ನು ಟಿಪ್ಪು ಸುಲ್ತಾನನ ಕಾಲದಲ್ಲಿ ರಚಿಸಲಾಯಿತು, ಆದರೆ ಅದನ್ನು ರಚಿಸಿದವರು, ಸಾಂಪ್ರದಾಯಿಕ ತಂತ್ರಗಳನ್ನು ಬಳಸಿಕೊಂಡು ಚಿತ್ರಗಳನ್ನು ಬಿಡಿಸಿದ ಸ್ಥಳೀಯ ಕಲಾವಿದರು. ಇದೇ ರೀತಿಯ ವರ್ಣಚಿತ್ರದ ಕುರುಹುಗಳು ಟಿಪ್ಪುವಿನ ಬೆಂಗಳೂರು ಅರಮನೆಯಲ್ಲೂ ದೊರೆತಿವೆ.

ಗೋಡೆ ಚಿತ್ರಗಳೊಂದಿಗೆ, ಸಚಿತ್ರ ಹಸ್ತಪ್ರತಿಗಳನ್ನು ರಚಿಸಲೂ ಸಹ, ಚಿತ್ರರಚನಾಕಾರರನ್ನು ನೇಮಕ ಮಾಡಲಾಗುತ್ತಿತ್ತು. ಅನೇಕ ಪುರಾತನ ಕುಟುಂಬಗಳ ಸುಪರ್ದಿನಲ್ಲಿ, ಆಕರ್ಷಕ ಹಾಗೂ ವರ್ಣಮಯ ಚಿತ್ರಗಳನ್ನು ಹೊತ್ತ ಈ ರೀತಿಯ ಸಚಿತ್ರ ಹಸ್ತಪ್ರತಿಗಳಿವೆ. ಇಂತಹ ಹಸ್ತಪ್ರತಿಗಳ ಪೈಕಿ ಅತ್ಯಂತ ಸುಪ್ರಸಿದ್ಧವಾದುದೆಂದರೆ, ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಶ್ರಯದಲ್ಲಿ ಸಿದ್ಧವಾದ ಬೃಹತ್ ಕೃತಿಯಾದ 'ಶ್ರೀತತ್ವನಿಧಿ'. ಈ ಹಸ್ತಪ್ರತಿಯಲ್ಲಿ ಒಂಭತ್ತು ಭಾಗಗಳಿದ್ದು, ಶಕ್ತಿನಿಧಿ, ವಿಷ್ಣುನಿಧಿ, ಬ್ರಹ್ಮನಿಧಿ, ಶಿವನಿಧಿ, ಮುಂತಾದ ವಿವಿಧ ವಿಷಯಗಳನ್ನು ಹೊಂದಿದೆ. ಆಗಮ, ಶಿಲ್ಪ, ಜ್ಯೋತಿಷ್ಯ, ತಂತ್ರ, ಮೊದಲಾದ ಶಾಖೆಗಳನ್ನು ಕುರಿತಾದ ಪುರಾತನ ಜ್ಞಾನವನ್ನು ಈ ವರ್ಣಚಿತ್ರಗಳು ಪ್ರತಿಬಿಂಬಿಸುತ್ತವೆ. ಬಟ್ಟೆ, ಗಾಜು, ಇತ್ಯಾದಿಗಳ ಮೇಲೆ ಜಲವರ್ಣ ತೈಲವರ್ಣಗಳನ್ನು ಬಳಸಿ ಮಾಡಿದ ರಾಜರ, ಹಾಗೂ ಇತರ ಕುಲೀನ ವ್ಯಕ್ತಿಗಳ ಭಾವಚಿತ್ರಗಳು, ಪುರಾಣದ ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಜಗನ್ಮೋಹನ ಅರಮನೆಯಲ್ಲಿ ಕಾಣಬಹುದು. ಸುಂದರಯ್ಯ, ಕೊಂಡಪ್ಪ, ಯಲ್ಲಪ್ಪ, ದುರ್ಗದ ವೆಂಕಟಪ್ಪ, ನರಸಿಂಹಯ್ಯ, ತಿಪ್ಪಾಜಪ್ಪ ಹಾಗೂ ಇತರರು ಈ ಶೈಲಿಯನ್ನು ಅಳವಡಿಸಿ, ಅಭಿವೃದ್ಧಿಪಡಿಸಿದರು. ಅಂದಿನ ಕಾಲದಲ್ಲಿ, ಚಿತ್ರಕಾರರೇ ತಮ್ಮ ಸಾಮಗ್ರಿಗಳನ್ನು ಸ್ವತಃ ತಯಾರು ಮಾಡಿಕೊಳ್ಳುತ್ತಿದ್ದರು. ಬಣ್ಣಗಳನ್ನು ನೈಸರ್ಗಿಕ ಮೂಲ, ತರಕಾರಿ, ಖನಿಜ ಅಥವಾ ಜೈವಿಕ ಮೂಲಗಳಿಂದ ಪಡೆದುಕೊಳ್ಳಲಾಗುತ್ತಿದ್ದು, ಕರ್ನಾಟಕದ ಎಲ್ಲ ಸಾಂಪ್ರದಾಯಿಕ ವರ್ಣಚಿತ್ರಗಳ ಹೆಗ್ಗುರುತಾದ ಪ್ಲಾಸ್ಟರ್ ಆಫ್ ಪ್ಯಾರಿಸ್ ನ ಕೃತಿಗಳ ಮೇಲೆ ಚಿನ್ನದ ಪದರಿನ ಲೇಪನವನ್ನು ಮಾಡಲಾಗುತ್ತಿತ್ತು. ಕಾಗದವಲ್ಲದೆ, ಚಿತ್ರರಚನಾಕಾರರು ಗಾಜಿನ ಮೇಲೂ ಚಿತ್ರ ಬಿಡಿಸುತ್ತಿದ್ದರು. ೨೦ನೆಯ ಶತಮಾನದ ಪ್ರಾರಂಭಿಕ ದಶಕಗಳಲ್ಲಿ, ಮೈಸೂರಿನ ಅಂದಿನ ಚಿತ್ರರಚನಾಕಾರರ ಮೇಲೆ ರಾಜ ರವಿವರ್ಮನ ಪ್ರಭಾವವನ್ನು ಕಾಣಬಹುದು.


ಭಿತ್ತಿ ವರ್ಣಚಿತ್ರ, ಜಗನ್ಮೋಹನ ಅರಮನೆ, ಮೈಸೂರು

# ಸಂಗೀತ

ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಎರಡು ಪದ್ಧತಿಗಳಾದ ಹಿಂದೂಸ್ಥಾನಿ ಹಾಗೂ ಕರ್ನಾಟಕ ಸಂಗೀತಗಳು ಇವೆ. ಹಿಂದೂಸ್ಥಾನಿ ಶೈಲಿಯು ಮುಖ್ಯವಾಗಿ ಉತ್ತರ ಭಾರತದಾದ್ಯಂತ ಇದ್ದರೆ, ಕರ್ನಾಟಕ ಪದ್ಧತಿಯು ದಕ್ಷಿಣ ಭಾರತದ ನಾಲ್ಕು ದ್ರಾವಿಡ ಭಾಷಾ ರಾಜ್ಯಗಳಲ್ಲಿ ಪ್ರಚಲಿತವಿದೆ. ಸ್ವಾರಸ್ಯವೆಂದರೆ, ಈ ಎರಡೂ ಪದ್ಧತಿಗಳು ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವುದು. ತುಂಗಭದ್ರಾ ನದಿಯು ಈ ಎರಡೂ ಪದ್ಧತಿಗಳ ಪ್ರದೇಶದ ಬಹುಭಾಗವನ್ನು ವಿಭಜಿಸಿದೆ. ಸಂಗೀತಕ್ಕೆ ಸಂಬಂಧಿಸಿದಂತೆ, 'ಕರ್ನಾಟಕ' ಎಂಬ ಪದವು ದಕ್ಷಿಣ ಭಾರತದ ಎಲ್ಲ ನಾಲ್ಕೂ ರಾಜ್ಯಗಳಾದ ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು ಹಾಗೂ ಕೇರಳಗಳಲ್ಲಿ ಪ್ರಚಲಿತವಿರುವ ಸಂಗೀತದ ಪದ್ಧತಿಯನ್ನು ಸೂಚಿಸುತ್ತದೆ. ಈ ಸಂಗೀತದ ವಿಕಸನದಲ್ಲಿ, ಕರ್ನಾಟಕದ ಪಾತ್ರವು ಗಮನಾರ್ಹವಾಗಿದ್ದು, ಪುರಾತನ ಸ್ಮಾರಕ, ಶಾಸನ ಹಾಗೂ ಸಾಹಿತ್ಯದಿಂದ ಇದು ಸಾಬೀತಾಗಿದೆ.

ಸಂಗೀತವು, ಸಾಹಿತ್ಯ ಹಾಗೂ ಇತರ ಸೃಜನಾತ್ಮಕ ಕಲೆಗಳಂತೆ, ಪುರಾತನ ಕಾಲದಿಂದಲೂ ಕರ್ನಾಟಕದಲ್ಲಿ ಪೋಷಿತವಾಯಿತು. ಜನರ ಸಾಮಾಜಿಕ ಹಾಗೂ ಧಾರ್ಮಿಕ ಜೀವನದಲ್ಲಿ ಅದು ಅವಿಭಾಜ್ಯ ಅಂಗವಾಯಿತು. ಎಲ್ಲೋರಾದ ಗುಹಾ ಶಿಲ್ಪಗಳಿಂದ, ವಿಜಯನಗರ ಕಾಲದ ದೇವಾಲಯಗಳವರೆಗೂ, ಈ ಕಲೆಯ ಅಭಿವೃದ್ಧಿಯಲ್ಲಿ, ಅದರ ವೈವಿಧ್ಯತೆ ಹಾಗೂ ಶ್ರೇಣಿಗೆ ಸಾಕ್ಷಿ ಒದಗಿಸುವ ಶಿಲ್ಪಕಲಾ ಕುರುಹುಗಳಿವೆ. ಸಮರ ಹಾಗೂ ಶಾಂತಿಯ ಎರಡೂ ಪರಿಸ್ಥಿತಿಗಳಲ್ಲಿ ಸಂಗೀತವು ಮುಖ್ಯವಾಗಿತ್ತು. ಸಂಗೀತದ ಬಗೆಗಿನ ಪಠ್ಯಗಳು ಪುರಾತನ ಸಿದ್ಧಾಂತಿಗಳನ್ನು ಕುರಿತಾಗಿ ಹೇಳಿವೆಯೇ ಹೊರತು, ಸಂಗೀತ ಚಿಂತನೆಗಳಿಗೆ ರೂಪ ನೀಡಿದ ನರ್ತನಕಾರರನ್ನು ಕುರಿತಾಗಿ ಹೇಳಿಲ್ಲ. ಆದರೂ, ಹಾಡುಗಾರರಾಗಿ ಅಥವಾ ವಾದ್ಯಗಳನ್ನು ನುಡಿಸುವವರಾಗಿ, ಕೆಲವು ನಿಷ್ಣಾತ ಪ್ರದರ್ಶನಕಾರರನ್ನು ಒಮ್ಮೊಮ್ಮೆ ಸಾಹಿತ್ಯ ಹಾಗೂ ಚರಿತ್ರೆಯಲ್ಲಿ ಹೆಸರಿಸಲಾಗಿದೆ. ಉದಾಹರಣೆಗೆ, ವೀರಶೈವ ಸಾಹಿತ್ಯದಲ್ಲಿ, ವೀಣೆಯ ಸುಮಾರು ೧೨ ಬಗೆಗಳನ್ನು ನುಡಿಸುವ ನೈಪುಣ್ಯವನ್ನು ಹೊಂದಿದ ಸಕಲೇಶ, ಮಾದರಸರಂತಹ ವ್ಯಕ್ತಿಗಳನ್ನು ಕುರಿತಾಗಿ ಬರೆದಿದೆ. ಅದೇ ರೀತಿ, ಕಹಳೆಯ ವಾದನವನ್ನು ಬಲ್ಲ ಅಲ್ಲಮದೇವಿ ಹಾಗೂ ದಂಡಿಗೆಯನ್ನು ನುಡಿಸುತ್ತಿದ್ದ ಗುಡ್ಡದೇವಿಯರ ಹೆಸರುಗಳನ್ನೂ ಇಲ್ಲಿ ಹೇಳಲಾಗಿದೆ. ಪುರಾತನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಉಲ್ಲೇಖಗಳ ಅಧ್ಯಯನವನ್ನು ಮಾಡಿದಾಗ, ಸಂಗೀತ ವಾದ್ಯಗಳ ಪೈಕಿ, ಕಿನ್ನರಿ ಹಾಗೂ ವೀಣೆ ಅತ್ಯಂತ ಜನಪ್ರಿಯವಾಗಿತ್ತೆಂದು ತಿಳಿದು ಬರುತ್ತದೆ. ಅಷ್ಟೇ ಅಲ್ಲ, ಅಭಿಲಾಷಿತೀರ್ಥ ಚಿಂತಾಮಣಿ (ಮಾನಸೋಲ್ಲಾಸ) ಹಾಗೂ ಸಂಗೀತ ರತ್ನಾಕರದಂತಹ ಕೃತಿಗಳಲ್ಲಿ, ಕಿನ್ನರಿ, ಅದರ ಎರಡು ವಿಧಗಳು, ಅದರ ರಚನೆ, ನುಡಿಸುವ ಪರಿ, ಇತ್ಯಾದಿಗಳನ್ನು ಕುರಿತಾಗಿ ವಿವರವಾದ ಉಲ್ಲೇಖಗಳಿವೆ. ಈ ವಾದ್ಯದ ಮೇಲಿನ ಹಿಡಿತ ಹಾಗೂ ತಜ್ಞತೆಗಾಗಿ, ಬೊಮ್ಮಯ್ಯನಂತಹ ತಜ್ಞರನ್ನು ಕಿನ್ನರಿಬೊಮ್ಮಯ್ಯ ಎಂದು ಕರೆಯುತ್ತಿದ್ದರು. ಎಲ್ಲ ವಾದ್ಯಗಳ ಪೈಕಿ, ವೀಣೆಯು ಅತ್ಯಂತ ಜನಪ್ರಿಯವಾಗಿತ್ತು. ಈ ವಾದ್ಯದ ವಿವರಣೆ ಹಾಗೂ ಅದನ್ನು ನುಡಿಸುತ್ತಿದ್ದ ತಜ್ಞರನ್ನು ಹೊರತುಪಡಿಸಿ, ಸ್ವಯಂವರ ಸ್ಪರ್ಧೆಯಲ್ಲಿ ಎಲ್ಲ ಕನ್ಯಾರ್ಥಿಗಳ ಪೈಕಿ ವೀಣಾ ಕೌಶಲ್ಯಗಳಿಂದ ಮಿಂಚುವ ವ್ಯಕ್ತಿಯನ್ನು ರಾಜಕುಮಾರಿಯು ಮದುವೆಯಾದಂತಹ ಸ್ವಾರಸ್ಯಕರ ಮಾಹಿತಿಯು ನಮಗೆ ತಿಳಿದು ಬರುತ್ತದೆ. ದೇವರ ನಿತ್ಯ ಪೂಜೆಯ ನಿಯಮಿತ ವೇಳೆಗಳಲ್ಲಿ ಸಂಗೀತವನ್ನು ಒದಗಿಸಲು ಸಿಬ್ಬಂದಿವರ್ಗದಲ್ಲಿ ವೈಣಿಕನೊಬ್ಬನನ್ನು ಬಹುತೇಕ ಪ್ರಮುಖ ದೇವಾಲಯಗಳು ಹೊಂದಿದ್ದವು. ಯುದ್ಧದ ದೃಶ್ಯಗಳಿಗೆ ಸಂಬಂಧಿಸಿದ ಶಿಲ್ಪಗಳಲ್ಲಿ ಹೋರಾಡುವವರನ್ನು ಪ್ರಚೋದಿಸುವ ವಾದ್ಯಗಳನ್ನೂ ಕಾಣಬಹುದು. ರಾಜರ ಆಸ್ಥಾನ, ದೇವಾಲಯ ಹಾಗೂ ಪ್ರಮುಖ ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲೂ, ಐದು ಪ್ರಮುಖ ವಾದ್ಯಗಳನ್ನು ಒಳಗೊಂಡ ಪಂಚಮಹಾವಾದ್ಯಗಳು ಗೌರವದ ಅವಿಭಾಜ್ಯ ಅಂಗವಾಗಿತ್ತು.

ಸಂಗೀತದ ಪ್ರಾರಂಭಿಕ ಶಾಸನಾತ್ಮಕ ಉಲ್ಲೇಖಗಳು ಕದಂಬರ ತಾಳಗುಂದ ಶಾಸನದಲ್ಲಿ ಕಾಣುತ್ತದೆ; ಇದರಲ್ಲಿ, ಕದಂಬರ ಅರಮನೆಯು ಸಂಗೀತದಿಂದ ಕಂಪಿಸುತ್ತಿದ್ದ ರೀತಿಯನ್ನು ವಿವರಿಸಲಾಗಿದೆ. ಬಾದಾಮಿಯ ಚಾಲುಕ್ಯರ ಕಾಲದಲ್ಲಿ, ಸಾಮಾನ್ಯವಾಗಿ ಸಂಗೀತಗಾರರು ದೇವಾಲಯಗಳೊಂದಿಗೆ ಸಂಪರ್ಕ ಹೊಂದಿರುತ್ತಿದ್ದರು. ಹೊಯ್ಸಳ ರಾಜರು ಹಾಗೂ ಕುಲೀನರು, ಸಂಗೀತ ಹಾಗೂ ನೃತ್ಯಗಳ ಆಚರಣೆ ಹಾಗೂ ಅಭಿವೃದ್ಧಿಯಲ್ಲಿ ಜನರಿಗೆ ಮಾರ್ಗದರ್ಶನ ನೀಡಿದರು. ಭರತನು ನಾಟ್ಯಶಾಸ್ತ್ರವನ್ನು ಬರೆದ ನಂತರ, ಸಂಗೀತದ ಬಗೆಗಿನ ಪ್ರಥಮ ಗಣನೀಯ ಕೃತಿಯೆಂದರೆ, ಮಾತಂಗನ ಬೃಹದ್ದೇಶಿ. ಈ ಕೃತಿಯಲ್ಲಿ, ಆತನ ಕಾಲದ ಜಾನಪದ ಹಾಡುಗಳ ಸಂಗೀತದ ಹಿಂದಿನ ವಿಜ್ಞಾನವನ್ನು ಕುರಿತಾಗಿ ವಿವರವಾಗಿ ತಿಳಿಸಲಾಗಿದೆ.ತನ್ನ ಕಾಲದಲ್ಲಿ ಇದ್ದ ಜಾನಪದ ಹಾಡುಗಳಿಗೆ ರಾಗವೆಂಬ ಪದವನ್ನು ಮಾತಂಗನು ಮೊದಲ ಬಾರಿಗೆ ಬಳಸಿದನು ಹಾಗೂ ಬಹುಶಃ ಇದು ಪ್ರಸ್ತುತ ಕಾಲದ ಸಂಗೀತದ ರಾಗ ಪದ್ಧತಿಗಳಿಗೆ ಬುನಾದಿಯನ್ನು ಹಾಕಿತು. ದೇವಗಿರಿಯ ಯಾದವ ರಾಜನಿಂದ ಆಶ್ರಯ ಪಡೆದ ಸಾರಂಗದೇವನು, ತನ್ನ ಸಂಗೀತರತ್ನಾಕರ ಗ್ರಂಥದಲ್ಲಿ ಒಟ್ಟಾರೆ ೨೬ ರಾಗಗಳನ್ನು ಹೆಸರಿಸಿದ್ದಾನೆ.

ಹಿಂದೂಸ್ಥಾನಿ ಹಾಗೂ ಕರ್ನಾಟಕ ಪದ್ಧತಿಗಳೆರಡರಲ್ಲೂ ಪ್ರಸ್ತುತ ಬಳಕೆಯಲ್ಲಿರುವ ಸಂಗೀತ ರಚನೆಗಳು ಹೆಚ್ಚಾಗಿ ಶಾಸ್ತ್ರೀಯ ಸಂಗೀತಕ್ಕೆ ಸಂಬಂಧ ಪಟ್ಟಿದ್ದು, ಆ ಪದ್ಧತಿಗಳು ಪ್ರಚಲಿತವಿರುವ ಸಂಪೂರ್ಣ ಪ್ರದೇಶಕ್ಕೆ ಸಾಮಾನ್ಯವಾಗಿವೆ. 'ಕರ್ನಾಟಕ ಭಾಷೆ' ಯಲ್ಲಿ ರಚಿತವಾದ ಖಂಡ, ಸುಖಸಾರಿಕ, ಇತ್ಯಾದಿ ರಚನೆಗಳನ್ನು ಬೃಹದ್ದೇಶಿಯಂತಹ ಪುರಾತನ ಪಠ್ಯಗಳಲ್ಲಿ ಹೇಳಲಾಗಿದೆ. ನಂತರದ ಪಠ್ಯಗಳಾದ ಮಾನಸೋಲ್ಲಾಸ ಹಾಗೂ ಸಂಗೀತ ರತ್ನಾಕರಗಳಲ್ಲಿ, ಕಂದ, ತ್ರಿಪದಿ, ಚತುಷ್ಪದಿ, ಷಟ್ಪದಿ ಹಾಗೂ ವರ್ಣಗಳಂತಹ ರಚನೆಗಳನ್ನು 'ಕರ್ನಾಟಕ ಭಾಷೆ' ಯಲ್ಲಿ ರಚಿಸಿ


Channakeshavara temple, Belur, Hassan district

ಹಾಡಿರುವುದರ ಬಗ್ಗೆ ವಿವರಿಸಲಾಗಿದೆ. ಗಮಕ ಕಲೆಯು ಕರ್ನಾಟಕಕ್ಕೆ ಅಪೂರ್ವವಾದುದು, ಇದು ಸಂಗೀತ ಸಾಹಿತ್ಯ ಹಾಗೂ ವಚನಗಳಂತಹ ಸಂಗೀತದ ಇತರ ರೂಪಗಳ ನಡುವೆ ಸೇತುವೆಯಾಗಿ ಪರಿಣಮಿಸಿದೆ; ಇದನ್ನು ಹಾಡಲೂಬಹುದು, ಪಠಿಸಲೂಬಹುದು – ಹಾಗಾಗಿ, ಇದು ಸಂಗೀತ ಹಾಗೂ ಸಾಹಿತ್ಯಗಳೆರಡೂ ಆಗುತ್ತದೆ.

ದಕ್ಷಿಣ ಭಾರತದ ಪ್ರಸ್ತುತ ಸಂಗೀತವು ಕರ್ನಾಟಕ ಸಾಮ್ರಾಜ್ಯವೆಂದು ಕರೆಯಲಾಗುವ ವಿಜಯನಗರದ ಗಾಢವಾದ ಪ್ರಭಾವವನ್ನು ಹೊತ್ತಿದೆ. ಈ ಸಂಗೀತದ ಆದ್ಯ ಪ್ರವರ್ತಕರಾಗಿ ಪುರಂದರದಾಸರಾಗಿದ್ದಾರೆ; ಅವರನ್ನು ಕರ್ನಾಟಕ ಸಂಗೀತ ಪಿತಾಮಹನೆಂದೂ ಕರೆಯಲಾಗುತ್ತದೆ. ಅನೇಕಾನೇಕ ನೂತನ ಅಂಶಗಳು ಹಾಗೂ ಅನೇಕ ವೈಶಿಷ್ಟ್ಯಗಳನ್ನು ಸಂಗೀತ ಕಲೆಗೆ ಪರಿಚಯಿಸಿದ ಗೌರವವು ಅವರಿಗೆ ಸಲ್ಲುತ್ತದೆ. ಅವರನ್ನು ಸಂಗೀತ ಪಿತಾಮಹನೆಂದು ಕರೆದರೂ, ಅವರ ಸಾಹಿತ್ಯ, ಭಕ್ತಿ, ಉಪದೇಶ, ಇತ್ಯಾದಿಗಳತ್ತ ಗಮನ ಹರಿಸಲಾಗುತ್ತದೆ. ಅವರನ್ನು ಸಂಗೀತ ತಜ್ಞ ಎನ್ನುವುದಕ್ಕಿಂತ, ಆಧ್ಯಾತ್ಮಿಕ ಮುಖಂಡರೆಂದು ಪರಿಗಣಿಸಲಾಗುತ್ತಿದ್ದು, ಅವರ ರಚನೆಗಳನ್ನು ಇಂದಿನ ಸಂಗೀತಗಾರರೂ ಹಾಡುತ್ತಾರೆ.

ರಾಜಧಾನಿ ವಿಜಯನಗರದಿಂದ ವಲಸೆ ಹೋದ ವಿದ್ವಾಂಸರು ಹಾಗೂ ಕಲಾವಿದರು ತಮ್ಮೊಂದಿಗೆ ನಿಸ್ಸಂದೇಹವಾಗಿ ವಿಜಯನಗರದಲ್ಲಿ ಅಭಿವೃದ್ಧಿಗೊಂಡ ಹೊಸ ಚಿಂತನೆ ಹಾಗೂ ತತ್ವಗಳನ್ನು ಒಯ್ದು, ದಕ್ಷಿಣದಾದ್ಯಂತ ಹರಡಿದರು. ಅವುಗಳಲ್ಲಿ ಗಮನಾರ್ಹವಾದುದೆಂದರೆ, ಕರ್ನಾಟಕ ಸಂಗೀತ ಪದ್ಧತಿಯು ನಿಂತಿರುವ ಮೇಳ ವ್ಯವಸ್ಥೆ ಅಥವಾ ತತ್ವ. ಮೇಳ ವ್ಯವಸ್ಥೆಯಲ್ಲದೆ, ವಿಜಯನಗರೋತ್ತರವಧಿಯಲ್ಲಿ, ತಲೆತಲಾಂತರಗಳಿಂದ ಅಸ್ತಿತ್ವದಲ್ಲಿದ್ದ ರಾಗಗಳ ಜನ್ಯಗಳಲ್ಲದೆ, ಈ ಪದ್ಧತಿಗೆ ಹೊಸದಾದ ಅನೇಕ ರಾಗಗಳ ಪರಿಚಯ ಹಾಗೂ ಜನಪ್ರಿಯಗೊಳಿಸುವ ಕಾರ್ಯವೂ ನಡೆಯಿತು. ಈ ರಾಗಗಳು, ಶತಮಾನಗಳಿಗೂ ಮುನ್ನವೇ ವಿಜಯನಗರದಲ್ಲಿ ಜನಪ್ರಿಯವಾಗಿದ್ದು, ಪ್ರಾಚೀನ ಸಂಪ್ರದಾಯಕ್ಕೆ ಸೇರಿದವೆಂದು ಅಂಗೀಕರಿಸಲಾಗಿತ್ತು. ಸಂಚಾರಿ ಸಂತರಾದ, ಪುರಂದರದಾಸರು ದಕ್ಷಿಣ ಭಾರತದಾದ್ಯಂತ ಸಂಚರಿಸಿ, ಭಕ್ತಿ ಹಾಗೂ ನ್ಯಾಯಪರತೆಯ ಜೀವನವನ್ನು ಪ್ರತಿಪಾದಿಸುವುದಲ್ಲದೆ, ರಾಜಧಾನಿ ವಿಜಯನಗರದಲ್ಲಿ ಅಭಿವೃದ್ಧಿಯಾದ ಹೊಸ ಚಿಂತನೆಗಳಿಂದ ಶ್ರೀಮಂತವಾದ ಸಂಗೀತ ಹಾಗೂ ಅದರಲ್ಲಿ ಸೇರ್ಪಡೆಯಾದ ನೂತನ ರಾಗಗಳು, ಸುಳಾದಿ ತಾಳಗಳ ಸರಳೀಕೃತ ರೂಪ ಹಾಗೂ ವೈವಿಧ್ಯತೆಯ ರಚನೆಗಳನ್ನೂ ಹರಡಿದರು. ಈ ಕಾರಣಕ್ಕಾಗಿ ಕರ್ನಾಟಕ ಸಂಗೀತ ಪಿತಾಮಹ ಎಂಬ ಬಿರುದು ಪುರಂದರದಾಸರಿಗೆ ನ್ಯಾಯಯುತವಾಗೇ ಸಂದಿದೆ.

ಪುರಂದರದಾಸರು ಭಕ್ತಿ ಚಳವಳಿಯ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು.ಸಂಗೀತದ ಅಭಿವ್ಯಕ್ತತೆ ಹಾಗೂ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆಗೆ ಸ್ವತಃ ಈ ಚಳವಳಿಯು ಹೊಣೆಯಾಗಿತ್ತು. ಅಲೆಮಾರಿ ಸಂತರು ತಮ್ಮ ಕುಲದ ಸೂತ್ರಗಳ ಪ್ರಚಾರವನ್ನು ಮಾಡಿ, ಜೊತೆಗೆ ಜನರಿಗೆ ಆಧ್ಯಾತ್ಮಿಕ ಹಾಗೂ ಸದಾಚಾರದ ಜೀವನವನ್ನು ನಡೆಸುವಂತೆ ಆಗ್ರಹಪಡಿಸುತ್ತಿದ್ದರು. ಜನರಿಂದ ಸುಲಭವಾಗಿ ಗ್ರಹಿಸಲು ಸಾಧ್ಯವಾಗುವ ಸರಳ ಹಾಡುಗಳು ಹಾಗೂ ಸಂಗೀತದ ಮೂಲಕ ಅವರು ಈ ಚಿಂತನೆಗಳನ್ನು ತಿಳಿಸಿದರು. ನಂತರದ ಅವಧಿಗಳಲ್ಲಿ ಸಂಗೀತವು ರೂಪುಗೊಳ್ಳುವಲ್ಲಿ ಈ ಹಾಡುಗಳು ಬೀರಿದ ಪ್ರಭಾವವು ಗಣನೀಯವಾದುದು. ರಾಗಗಳ ನೂತನ ಮಿಶ್ರಣದ ಮೂಲಕ ಈ ರಚನೆಗಳನ್ನು ಹೆಚ್ಚು ಆಕರ್ಷಕ ಗೊಳಿಸುವುದಲ್ಲದೆ, ಪ್ರಾಚೀನ ಮೌಲ್ಯಗಳನ್ನು ಉಳಿಸಿಕೊಂಡ ನಂತರ, ಅವುಗಳ ಸ್ವರೂಪವನ್ನು ಸರಳೀಕರಿಸಿದರು. ನಾಲಗೆ ತಿರುಚುವ ಹಳೆಯ ಪ್ರಬಂಧಗಳಿಗಿಂತ ಈ ನೂತನ ರಚನೆಗಳು ವಿಭಿನ್ನವಾಗಿದ್ದು, ಅಲ್ಪ ಕಾಲದಲ್ಲೇ ಅತ್ಯಂತ ಜನಪ್ರಿಯವಾದವು.

ಮುಪ್ಪಿನ ಷಡಾಕ್ಷರಿ, ಬಾಲ ಲೀಲಾ ಮಹಾಂತ ಶಿವಯೋಗಿ, ನಾಗಭೂಷಣ ಗಣಾನಾಥಾರ್ಯ, ಮಡಿವಾಳಪ್ಪ ಕಡಕೋಳ ಹಾಗೂ ನಂಜುಂಡ ಶಿವಯೋಗಿಯಂತಹ ವೀರಶೈವ ಮತಕ್ಕೆ ಸೇರಿದ ಅನೇಕ ರಚನಾಕಾರರು ಇದ್ದರು. ಹರಿದಾಸರೊಂದಿಗೆ, ಇತರ ಮತ ಅಥವಾ ಧಾರ್ಮಿಕ ಚಿಂತನೆಯ ಪಂಥಗಳಿಗೆ ಸೇರಿದ ಅನೇಕ ರಚನಾಕಾರರಿದ್ದರು. ಸಂಗೀತದ ಪ್ರಸ್ತುತಿಗೆ ಒಗ್ಗಿಕೊಳ್ಳುವ ಶಿವಶರಣರ ಕೃತಿಗಳು, ಸಂಗೀತದ ಅಭಿವೃದ್ಧಿಗೆ ಮಹತ್ತರವಾದ ಉತ್ತೇಜನವನ್ನು ಒದಗಿಸಿದವು. ಇತರ ಧಾರ್ಮಿಕ ಪಂಥಗಳ ಸದಸ್ಯರಾದ ಚಿದಾನಂದಾವಧೂತರು ಹಾಗೂ ಶಿಶುವಿನಹಾಳದ ಷರೀಫ಼ ಸಾಹೇಬರು ಇಂದ್ರಿಯಾತೀತವಾದ ಅನುಭವಗಳನ್ನು ಕುರಿತಾದ ಹಾಡುಗಳನ್ನು ರಚಿಸಿದರು.



# ನೃತ್ಯ

ಕರ್ನಾಟಕದ ಸಾಂಪ್ರದಾಯಿಕ ನೃತ್ಯಗಳನ್ನು ವಿಸ್ತೃತವಾಗಿ ಜಾನಪದ (ಜಾನಪದ ನೃತ್ಯ) ಹಾಗೂ ಶಿಷ್ಟವೆಂದು (ಶಾಸ್ತ್ರೀಯ ನೃತ್ಯ) ವಿಂಗಡಿಸಬಹುದು. ಜಾನಪದವು ಕೇವಲ ಕೆಲವು ಪ್ರದೇಶಗಳಿಗೆ ಸ್ಥಳೀಕರಣಗೊಂಡಿದ್ದರೆ, ಶಿಷ್ಟವು ರಾಜ್ಯಾದ್ಯಂತ ಹಾಗೂ ಅದರಾಚೆಗೂ ಹರಡಿದೆ. ಬಹಳ ಹಿಂದಿನ ಕಾಲದಿಂದಲೇ, ರಾಜ್ಯದ ಜನರು ನೃತ್ಯ ಕಲೆಯಲ್ಲಿ ತೊಡಗಿದ್ದರೆಂದು ತೋರುತ್ತದೆ. ಶಿಲಪ್ಪದಿಗಾರಂ ಎಂಬ ತಮಿಳು ಪಠ್ಯದಲ್ಲಿ, ಚೇರ ಅರಸನಾದ ಸೆಂಗುವಟ್ಟನ್ ಕನ್ನಡಿಗರ ನೃತ್ಯವನ್ನು ವೀಕ್ಷಿಸಿದ ಕುರಿತಾಗಿ ಉಲ್ಲೇಖವಿದೆ. ಬಾದಾಮಿ ಚಾಲುಕ್ಯರ ಕಾಲದ ಹೆಸರಾಂತ ನೃತ್ಯಪಟು ಹಾಗೂ ನಟನಾದ ಅಚಲ ಎಂಬುವನನ್ನು ಕುರಿತಾಗಿ ಶಾಸನವೊಂದು ತಿಳಿಸುತ್ತದೆ. ಈ ಅವಧಿಯಲ್ಲಿ, ಹಲವಾರು ನಾಟ್ಯ ಶಾಲೆಗಳು ಜನಪ್ರಿಯವಾಗಿದ್ದವು, ಆದರೆ ಭರತನ ನಾಟ್ಯ ಶಾಲೆಯು ಮುಂಚೂಣಿಯಲ್ಲಿತ್ತು. ಪಟ್ಟದಕಲ್ಲಿನ (ಕ್ರಿ.ಶ. ೭೭೮ – ೭೯) ಶಾಸನವೊಂದು, ದೇವಾಲಯಗಳಲ್ಲಿ ನೃತ್ಯ ಸೇವೆಯನ್ನು ಸಲ್ಲಿಸಲು ದೇವದಾಸಿಯರನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತೆಂದು ತಿಳಿಸುತ್ತದೆ.ದೇವಾಲಯಗಳಲ್ಲಿ ಸಂಗೀತ–ನೃತ್ಯಗಳನ್ನು ಒಂದು ಭಾಗವಾಗಿ ಸೇರ್ಪಡೆ ಮಾಡಿಕೊಳ್ಳುವಲ್ಲಿ ಕಾಳಾಮುಖ ಶೈವರು ಅತ್ಯಂತ ಉತ್ಸುಕರಾಗಿದ್ದರು. ದೇವಾಲಯಗಳು ಹೆಚ್ಚು ಪೂಜನೀಯವಾದಂತೆಲ್ಲ, ನೃತ್ಯ ಪದ್ಧತಿಗಳ ಶಾಸ್ತ್ರೀಯ ಸಂಪ್ರದಾಯಕ್ಕೆ ಆಶ್ರಯ ದೊರೆಯಿತೆಂದು ತೋರುತ್ತದೆ. ರಾಜರು ಹಾಗೂ ಸೇನಾಧಿಪತಿಗಳು ಕಲೆಯ ಆಶ್ರಯದಾತರಾಗಿದ್ದು, ಪ್ರಾರಂಭಿಕ ಕಾಲದ ಕಲಾವಿದರಲ್ಲಿ ರಾಜಕುಮಾರ ರಾಜಕುಮಾರಿಯರೂ ಕೂಡ ಕಲೆಯಲ್ಲಿ ಅತ್ಯಂತ ನೈಪುಣ್ಯತೆ ಹೊಂದಿದ್ದರು.

ಗಂಗ ಅರಸರಾದ ದುರ್ವಿನೀತ ಹಾಗೂ ನರಸಿಂಹದೇವ ಸತ್ಯವಾಕ್ಯರು ನೃತ್ಯ ಹಾಗೂ ಹಾಡುಗಾರಿಕೆಯಲ್ಲಿ ನಿಷ್ಣಾತರಾಗಿದ್ದರೆಂದು ವಿವರಿಸಲಾಗಿದೆ. ರಾಷ್ಟ್ರಕೂಟ ಹಾಗೂ ನಂತರದ ಚಾಳುಕ್ಯರ ಕಾಲಗಳಲ್ಲಿ, ಆಸ್ಥಾನ ನರ್ತಕಿಯರಿಗೆ ದೇವಾಲಯಗಳಲ್ಲಿ ಸೇವೆಗಳನ್ನು ಒಪ್ಪಿಸಲಾಗುತ್ತಿದ್ದು ಅವರು ಕಲೆಯ ಪರಿಪಾಲಕರಾಗಿದ್ದರು. ಕಳಚುರಿ ಸಾವಲದೇವಿ ಹಾಗೂ ಹೊಯ್ಸಳ ಚಿನ್ನಲಾದೇವಿಯರು ನಿಷ್ಣಾತಿ ಪಡೆದ ನರ್ತಕಿಯರಾಗಿದ್ದರು. ಹೊಯ್ಸಳ ವಿಷ್ಣುವರ್ಧನನ ರಾಣಿಯಾದ ಶಾಂತಲಾದೇವಿಯನ್ನು ನೃತ್ಯ ತಜ್ಞೆಯೆಂದು ಹಲವಾರು ಶಾಸನಗಳಲ್ಲಿ ಹೊಗಳಲಾಗಿದೆ. ವಿಜಯನಗರ ಆಳ್ವಿಕೆಯು ಕುಶಲ ಕಲೆಗಳ ಉತ್ತೇಜನದ ಕಾಲವಾಗಿತ್ತು. ಕೃಷ್ಣದೇವರಾಯನ ಆಸ್ಥಾನದಲ್ಲಿ ಭಂಡಾರು ಲಕ್ಷ್ಮೀನಾರಾಯಣನು ನಾಟ್ಯಾಚಾರ್ಯನಾಗಿದ್ದು, ಆತನನ್ನು ಅಭಿನವ ಭರತನೆಂದೂ ಕರೆಯುತ್ತಿದ್ದರು.

ಕೆಳದಿಯ ಒಂದನೆಯ ವೆಂಕಟಪ್ಪ ನಾಯಕನ ಆಳ್ವಿಕೆಯಲ್ಲಿ, ಇಕ್ಕೇರಿಯಲ್ಲಿ ಸುಂದರವಾದ ನಾಟ್ಯಶಾಲೆಯ ನಿರ್ಮಾಣವಾಯಿತು. ವಿಜಯನಗರವು ಅನುಸರಿಸಿದ ಹಾದಿಯನ್ನೇ ಅನುಸರಿಸುತ್ತ, ಮೈಸೂರು ಆಸ್ಥಾನವೂ ನೃತ್ಯ ಸಂಪ್ರದಾಯಕ್ಕೆ ಉತ್ತೇಜನವನ್ನು ನೀಡಿತು. ವಿನೋದ ಕಾಲಕ್ಷೇಪಗಳಿಗೆ ಮೀಸಲಾದ ಮೂರನೆಯ ಸೋಮೇಶ್ವರನ ಮಾನಸೋಲ್ಲಾಸದ ನಾಲ್ಕನೆಯ ಅಧ್ಯಾಯದಲ್ಲಿ, ನೃತ್ಯವನ್ನು ಕುರಿತಾಗಿ ವಿಸ್ತೃತವಾಗಿ ವಿವರಿಸಲಾಗಿದೆ.

೧೯ನೆಯ ಶತಮಾನದ ಅಂತ್ಯದ ವೇಳೆಗೆ, ಚಿಂತಾಮಣಿಯ ಬಳಿ ಇರುವ ಹೂವಡಿ ಅಥವಾ ಪೂವಲ್‌ವಾಡಿ, ತಿರುಮಕೂಡ್ಲು, ನರಸೀಪುರ, ಮುಳಬಾಗಿಲು, ಹಾಗೂ ಇತರ ಸ್ಥಳಗಳಲ್ಲಿ, ನಟ್ಟುವನಾರ್‌ಗಳು ಅಥವಾ ನೃತ್ಯ ಗುರುಗಳೊಂದಿಗೆ ಜೀವಿಸುತ್ತಿದ್ದ ೨೦೦ರಷ್ಟು ವೃತ್ತಿಪರ ನೃತ್ಯಗಾತಿಯರು ಇದ್ದರು.ಮುಳಬಾಗಿಲಿನ ಕೇವಲ ಒಂದು ದೇವಾಲಯದಲ್ಲೇ, ೧೪ ನರ್ತಕಿಯರು ಇದ್ದು, ವಾರಕ್ಕೊಮ್ಮೆ ನೃತ್ಯದ ರೂಪದಲ್ಲಿ ದೇವಾಲಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಇದಲ್ಲದೆ, ಸಂಸ್ಕೃತ, ಭರತನಾಟ್ಯ ಹಾಗೂ ಅಭಿನಯದಲ್ಲಿ ನುರಿತವರಾದ ಅನೇಕ ಬ್ರಾಹ್ಮಣ ವಿದ್ವಾಂಸರು, ಈ ದೇವದಾಸಿಯರಿಗೆ ಅಭಿನಯದ ಗಹನವಾದ ಕಲೆಯನ್ನು ಬೋಧನೆ ಮಾಡಿದರು. ಅಂತಹ ಒಬ್ಬ ಹೆಸರಾಂತ ವ್ಯಕ್ತಿಯೆಂದರೆ ಪಾನಸೇಕರಿ ವೆಂಕಟಸುಬ್ಬ ಭಟ್ಟ – ಇವರು ಮುಳಬಾಗಿಲಿನ ಪೂಜ್ಯನೀಯ ಗುರುವಾಗಿದ್ದು, ಕಾಲ್ಚಳಕದಲ್ಲಿ ಖಚಿತತೆ ಹಾಗೂ ಕೌಶಲ್ಯಕ್ಕೆ ಹೆಸರುವಾಸಿಯಾಗಿದ್ದರು.

ಪೂರ್ವದ ಮೈಸೂರು ರಾಜ್ಯದಲ್ಲಿ ಇಂತಹ ಬ್ರಾಹ್ಮಣ ವಿದ್ವಾಂಸರ ಯತ್ನಗಳಿಂದ, ಮೈಸೂರಿನಲ್ಲಿ ಭರತನಾಟ್ಯವು ತನ್ನದೇ ಆದ ಶೈಲಿಯಲ್ಲಿ ಅಭಿವೃದ್ಧಿಯಾಯಿತು. ಇದರಲ್ಲಿ, ಭರತನಾಟ್ಯದ ನೃತ್ಯಸಂಚಯವೊಂದು ಅಭಿವೃದ್ಧಿಯಾಗಿ, ಮಂಗಳಂ, ಸ್ತುತಿ, ಅಲರಿಪು, ಜತಿಸ್ವರ, ವೇಮಮ್, ಪದ ಹಾಗೂ ತಿಲ್ಲಾನಗಳು ಸರದಿಯಂತೆ ಬಂದವು. ಕವೀಶ್ವರ ಗಿರಿಯಪ್ಪ, ಕಾಶೀಗುರು, ಅಮೃತಪ್ಪ, ಅಪ್ಪಯ್ಯ, ದಾಸಪ್ಪ, ಕಿಟ್ಟಪ್ಪ ಹಾಗೂ ಜೆಟ್ಟಿ ತಾಯಮ್ಮ ಕೆಲವು ಹೆಸರಾಂತ ನೃತ್ಯಗುರುಗಳಾಗಿದ್ದರು, ಹಾಗೆಯೇ, ವೆಂಕಟಲಕ್ಷಮ್ಮ, ಪುಟ್ಟದೇವಮ್ಮ, ರಮಾಮಣಿ, ಹಾಗೂ ಮೂಗೂರು ತ್ರಿಪುರಸುಂದರಮ್ಮ ಹೆಸರಾಂತ ನರ್ತಕಿಯರಾಗಿದ್ದರು.

ಭರತನಾಟ್ಯದ ಬೋಧನೆಯ ಪ್ರಮುಖ ಕೇಂದ್ರವಾಗಿ ಮುಂದೆ ಬೆಂಗಳೂರು ಗುರುತಿಸಲ್ಪಟ್ಟಿತು. ೧೯೧೦ ಹಾಗೂ ೧೯೩೦ರ ನಡುವೆ, ಸಾಮಾಜಿಕ ಮೌಲ್ಯಗಳ ಭಂಗದಿಂದ ಹಾಗೂ ಸಾಂಪ್ರದಾಯಿಕ ಹಾಗೂ ಸ್ಥಳೀಯ ಕಲೆಯನ್ನು ಆವರಿಸಿದ ಪಾಶ್ಚಾತ್ಯ ಶಿಕ್ಷಣದಿಂದಲೂ, ಕಲೆ ಹಾಗೂ ಕಲಾವಿದರು ಅವನತಿಯನ್ನು ಹೊಂದಿದರು. ೧೯೩೦ರ ನಂತರ, ಇ. ಕೃಷ್ಣ ಅಯ್ಯರ್, ರುಕ್ಮಿಣಿ ದೇವಿ ಅರುಂಡೇಲ್, ರಾಮಗೋಪಾಲ್, ಯು.ಎಸ್. ಕೃಷ್ಣರಾವ್ ಹಾಗೂ ಅವರ ಮಡದಿಯಾದ ಚಂದ್ರಭಾಗಾ ದೇವಿಯವರು, ೧೯೪೦ರ ದಶಕದಲ್ಲಿ ಈ ಕಲೆಯನ್ನು ಜನಪ್ರಿಯಗೊಳಿಸಿದರು.